ಕೊರವಂಜಿ

Koravanji



ನವೆಂಬರ್

೧೯೩೪

★

ಸಂಪಾದಕರು:

ಶ್ರೀ॥ ರಾ. ಶಿ.

ಬರಹಗಾರರು:

ಶ್ರೀ॥ ಪಾಪು
ಶ್ರೀ॥ ರೇವಣ್ಣ
ಶ್ರೀ॥ ಬಿ. ಎನ್. ಮೂರ್ತಿ
ಶ್ರೀ॥ ರಾಮಕೃಷ್ಣ
ಶ್ರೀ॥ ಅಳ್ಳಿಗನಾರ
ಶ್ರೀ॥ ಅ. ರಾ. ಸೇ.
ಶ್ರೀ॥ "ಕೇಫ"
ಶ್ರೀ॥ ಪಾಟಾಳಿ
ಶ್ರೀ॥ ಕಾಮತ್
ಶ್ರೀ॥ "ನೊಂದಯ್ಯ"
ಶ್ರೀ॥ ರುದ್ರಮ್ಮ
ಶ್ರೀ॥ ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ ಕೇವಲ ನಾಲ್ಕಾಣೆ

ಮನೆಗೆ ಕಾಂತಿ !! ಮನಕ್ಕೆ ಶಾಂತಿ !! ದೇಹಕ್ಕೆ ವಿಶ್ರಾಂತಿ !!!

ಕಣ್ಣುಗಳಿಗೆ ತಂಪು ಬೀರುವುದು,

ದೇದೀಪ್ಯಮಾನ

ಮೈಸೂರು ಬಲ್ಬು



ಅದು ಭಾರತದ್ದು !

ಸುಲಭ ಬೆಲೆಯದು !


ಹೆಚ್ಚು ಬಾಳಿಕೆ ಬರುವುದು !!


ಫೋನ್ : 2026 ಗ್ರಾಮ್ : 'Mysorlamp'

—— o ——

ಮೈಸೂರು ಲ್ಯಾಂಪ್ ವರ್ಕ್ಸ್ ಲಿ.,

ಮಲ್ಲೇಶ್ವರಂ - - - ಬೆಂಗಳೂರು 3


10 ವರ್ಷಗಳಿಂದಲೂ....
ಚಲನ ಚಿತ್ರ ಪ್ರಪಂಚಕ್ಕೆ-
ಅಖಂಡ ಸೇವೆಸಲ್ಲಿಸುತ್ತಾ....
ಪ್ರದರ್ಶಕರ ಧನಲಾಭಕ್ಕೂ...
ಪ್ರೇಕ್ಷಕರ-ರಸದೂಟಕ್ಕೂ......
ಅತ್ಯುತ್ತಮವಾದ ಚಿತ್ರಗಳನ್ನು
ಒದಗಿಸುತ್ತಿರುವ.....
ತಲ್ಲಂ ಪಿಕ್ಚರ್ಸ್‌ರವರ ಮುಂದಿನ ಚಿತ್ರಗಳು:
ಅನಾರ್ಕಲಿ
ಸಂಗಂ
ಡೊಂಗರಾಮುಡು
ಪ್ರೊಡಕ್ಷನ್ ನಂ. 15
ಚಾಂದಿನಿ ಚೌಕ್
TALLAM PICTURES CIRCUIT
BANGALORE-2



ಕ್ಯೂ ನಿಂತು ಬೇಸತ್ತಾಗ...

ನಿಮ್ಮ ದೇಹ ಮನಸ್ಸು ಎರಡೂ ನೆಮ್ಮದಿಯಿಂದಿರುವುದಿಲ್ಲ - ಅಲ್ಲವೆ? ಮನಸ್ಸಿಗೆ ಉಲ್ಲಾಸವನ್ನೂ ದೇಹಕ್ಕೆ ಚೈತನ್ಯವನ್ನೂ ಕೊಡುವ ಸಾಧನವೆಂದರೆ ಸ್ನಾನ! ಸ್ನಾನಕ್ಕೆ ಮೈಸೂರು ಸ್ಯಾಂಡಲ್ ಸೋಪು ಮರೆಯಬೇಡಿ ಮತ್ತೆ

ಮೈಸೂರು ಸ್ಯಾಂಡಲ್ ಸೋಪು

ದೇಹದ ಕಶ್ಮಲವನ್ನು
ನಿವಾರಿಸುವುದಲ್ಲದೆ
ಮೃದು ಮಧುರವಾದ
ಸುವಾಸನೆಯನ್ನು
ಕೊಡುತ್ತದೆ



ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು. MEMBER ISTMA

ಬೆಂಗಳೂರು:

ಗೀತಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ
ಶೀಘ್ರದಲ್ಲಿಯೇ ನಿರೀಕ್ಷಿಸಿ

ಸಂಪೂರ್ಣವಾಗಿಯೂ ಹೊಸ ತರಹೆಯ ಚಿತ್ರ



ನ್ಯಾಷನಲ್ ಪ್ರೊಡಕ್ಷನ್ಸ್‌ರವರ—

ಅಮ್ಮೈಯಪ್ಪನ್


—(ತಮಿಳು)—

ಎಸ್. ವರಲಕ್ಷ್ಮಿ - ಜಿ. ಶಕುಂತಲಂ - ಎಸ್. ಎಸ್. ರಾಜೇಂದ್ರನ್ - ಡಿ. ಬಾಲಸುಬ್ರಹ್ಮಣ್ಯಂ - ವಿ. ಕೆ. ರಾಮಸ್ವಾಮಿ - ಎಂ. ಆರ್. ಸ್ವಾಮಿನಾಥನ್

★

ಕಥೆ-ಸಂಭಾಷಣೆ:— ಎಂ. ಕರುಣಾನಿಧಿ

VIJAYA TALKIE RELEASE



ಸಂಪುಟ ೧೩ ನವೆಂಬರ್ ೧೯೫೪ ಸಂಚಿಕೆ ೮

ನೂತನ ಚೇತನ ರಷ್ಯಾ ಏಳುವರ್ಷಗಳಲ್ಲಿ ಸಾಧಿಸಿದುದನ್ನು ನವಭಾರತದಲ್ಲಿ ಐದೇವರ್ಷಗಳಲ್ಲಿ ಸಾಧಿಸಿ, ಭಾರತೀಯರ ಅನ್ನಬ್ರಹ್ಮದ ದೇಗುಲಕ್ಕೆ ಪೂರ್ಣ ಸೇವೆಮಾಡಿದ **ಶ್ರೀ ರಫಿ ಅಹಮದ್ ಕಿದ್ವಾಯ್** ಅವರು ದೇವರ ಪಾದಾರವಿಂದವನ್ನು ಸೇರಿದರಂತೆ—ಮಂಚವಾಂಡ್ಲುಕು ಮರಣಮೇ ಸಾಕ್ಷಿ! ಎಂದು ನಮ್ಮ ನೆರೆಯವರು ಹೇಳಿದ್ದು ಜ್ಞಾಪಕಕ್ಕೆ ಬರುತ್ತೆ.

ಪ್ರಧಾನಮಂತ್ರಿ ಪಂಡಿತ ನೆಹರೂರವರಿಗೆ ಕೈಮುರಿದಂತೆ—ಕಾಂಗ್ರೆಸ್ಸಿಗರಿಗೆ ಭುಜವೇ ಸಡಿಲಿದಂತೆ—ಭಾರತೀಯರೆಲ್ಲರಿಗೂ ಗಂಟಲು ಒತ್ತಿದಂತೆ—ಆಗಿದೆ.

ನವಭಾರತದ ಪುನರ್ನಿರ್ಮಾಣದಲ್ಲಿ ಅತಿಯಶಸ್ವಿಯಾಗಿ ಧೈರ್ಯದಿಂದ, ಕೆಲಸಮಾಡಿದ ಭಾರತದ ಸುಪುತ್ರನಿಗಾಗಿ ಕೊರವಂಜಿಯು ದುಃಖಿಸಿ ಆತನ ಆತ್ಮಕ್ಕೆ ಶಾಂತಿ ದೊರಕಲೆಂದು ಪ್ರಾರ್ಥಿಸುತ್ತಾಳೆ.

ಕುಹಕಿಡಿಗಳು

ದೀಪಾವಳಿ ಹಬ್ಬವನ್ನು, ನೆರೆ ಸರ್ಕಾರವು ಕತ್ತಲೆಯಲ್ಲೇ, ನಡೆಸಿತಂತೆ.

-ಘರ್ ಘರ್‌ಮೇ ದಿವಾಳಿ-ಮೇರಾ ಘರ್‌ಮೇ ಅಂಧೇರಿ! (ಮುಹಮ್ಮದ್ ಅಲಿ)

ಶ್ರೀಮಾನ್ ಚರ್ಚಿಲ್ಲರವರು ಪಂಡಿತ ನೆಹ್ರುರವರ ಚಿತ್ರವನ್ನು ಬರೆಯುತ್ತಾರೆ ಎಂಬುದು ಸುಳ್ಳಂತೆ—

—ಅಷ್ಟು ಕೋಪವಿಲ್ಲ ಚರ್ಚಿಲ್ಲರಿಗೆ!!

*　　　*　　　*

ಶ್ರೀ ದೇಶಮುಖರಿಗೆ ಒಂದು ಸಲಹೆ:—

—“ಅರಿಶಿನದಮೇಲೆ ಸುಂಕಹಾಕಿ; ಹೆಣ್ಣುಮಕ್ಕಳೆಲ್ಲಾ ಅರಿಶಿನ ಉಪಯೋಗಿಸಲು ಶುರುಮಾಡುತ್ತಾರೆ, ಅವರ ಗಂಡಂದಿರ ಮುಖ ಇಳಿಯುತ್ತೆ – ನಿಮ್ಮ ಮುಖ ಹಿಗ್ಗುತ್ತೆ” ಎಂದು ಹೆಬ್ಬಿಯ ವಾಚಕರೊಬ್ಬರು ಬರೆದಿದ್ದಾರೆ.

*　　　*　　　*

ರಾಜಕಾರಣಪಟುಗಳೊಬ್ಬರಿಗೆ ಚೆಂಡಾಟದ ಹುಚ್ಚು ಹೆಚ್ಚಂತೆ.

—ರಾಜಕಾರಣದಲ್ಲೂ – ಹುಚ್ಚೇ ಅಂತೆ—

*　　　*　　　*

ಚೀನಾದಲ್ಲಿನ ದಿನಪತ್ರಿಕೆಗಳೆಲ್ಲಾ ನೆಹ್ರೂರವರ ಸುದ್ದಿಗಳಿಂದ ತುಂಬಿರುವುದರಿಂದ, ದೇಶದ ಸ್ಥಳೀಯ ಸುದ್ದಿಗಾಗಿಯೇ ಒಂದು ಸಂಚಿಕೆ ಹೊರಡಿಸಬೇಕೆಂದು ಒಬ್ಬ ಸಂಪಾದಕರು ಯೋಚಿಸಿರುವರಂತೆ.

*　　　*　　　*

“ಈ ಬಿಸಿ ಬಿಸಿ ಕಾದಂಬರಿಯು ಅಶ್ಲೀಲವಲ್ಲ” ಎಂದು ನ್ಯಾಯಾಧೀಶ್ವರರು ತೀರ್ಪಿತ್ತರಂತೆ—

—ಲೇಖಕರು ಸುಪ್ರೀಂಕೋರ್ಟಿಗೆ ಅಪೀಲುಹೋಗುವರಂತೆ.

*　　　*　　　*

ಚೀಣಾದಲ್ಲಿ ಟೀಕುಡಿಯುವ ಅಭ್ಯಾಸವನ್ನು ಕಾಫಿ ಕುಡಿಯುವ ಅಭ್ಯಾಸಕ್ಕೆ ಮಾರ್ಪಡಿಸಿದರೆ, ನಮ್ಮ ವ್ಯಾಪಾರಕ್ಕೆ ಸೊಗಸು ಎಂದು ಪ್ಲಾಂಟರೊಬ್ಬರು ಹೇಳಿದರಂತೆ.

—ಏನು ಕಷ್ಟ! ದಕ್ಷಿಣ ಭಾರತೀಯರನ್ನೇ ಚೀಣಾದ ರಾಯಭಾರಿ ಕಚೇರಿಗೆ ವರ್ಗಾಯಿಸಿದರೆ—ಬಲುಬೇಗ ಸಾಧ್ಯ!!

*　　　*　　　*

ಹೆಬ್ಬಾವಿನ ಚರ್ಮದಲ್ಲಿ ಬೆಲ್ಟ್‌ಮಾಡಿಸಿ ಹಾಕಿಕೊಂಡರೆ ತಿಂದದ್ದೆಲ್ಲಾ ಸುಲಭವಾಗಿ ಜೀರ್ಣವಾಗುತ್ತೆ. (ಹೇಳಿಕೆ)

—ಓತಿಕೇತನ ಚರ್ಮದಲ್ಲಿ ಟೋಪಿ ಮಾಡಿಸಿ ಹಾಕಿಕೊಂಡರೆ, ರಾಜಕೀಯದಲ್ಲಿ ಸುಖವಾಗಿ ಬಾಳಬಹುದಲ್ಲವೇ?—ತಲೆಯಾಡಿಸುತ್ತಾ!

*　　　*　　　*

ಉರಿಗಾಳು

ಅಮೇರಿಕಾದಿಂದ ಪಾಕಿಸ್ಥಾನಕ್ಕೆ ಅತ್ಯಾಧುನಿಕ ಯುದ್ಧಾಸ್ತ್ರಗಳು ಇಷ್ಟರಲ್ಲೇ ಬರಲಿವೆಯಂತೆ....ಅಂದರೆ, ಅಮೇರಿಕನ್ ಯೋಧರೇ ಬರುತ್ತಾರೆ ಎಂದರ್ಥ.

* * *

ಪೀಕಿಂಗ್‌ನಲ್ಲಿ ನೆಹರು ಅವರು ಚೀಣಾದವನೊಬ್ಬನನ್ನು ನಿನ್ನ ಹೆಸರೇನು, ಎಂದು ಕೇಳಿದಾಗ, ಆತ, 'ಶೀನು' ಎಂದುತ್ತರ ಕೊಟ್ಟನಂತೆ. ಶೀನು ಎಂಬುದು ಕನ್ನಡವಾಯಿತು. ಚೀಣೀಯಲ್ಲಿ ನಿನ್ನ ಹೆಸರೇನು? ಎಂದಾಗ, ಆತ, "ಶಿಹ್‌ಘೂ" ಎಂದು ವಿಶದಪಡಿಸಿದನಂತೆ.

* * *

ಅತೃಪ್ತಿಯಿಂದ ನರಳುವ ಮೇಷ್ಟರುಗಳಿಂದ ಸಮಾಜಕ್ಕೆ ತುಂಬಾ ಹಾನಿ, ಎಂದು ಡಾ|| ಅಮರನಾಥ ಝಾ ಹೇಳಿದರು .. ಹೌದು! ಹುಡುಗರನ್ನು ಸ್ಟ್ರೈಕ್ ಮಾಡಿಸಿ, ಅವರು ಮನೆಗಳಿಗೆ ಹೋಗಿ ಮಲಗಬಹುದು, ಅದೇ ದೊಡ್ಡ ವಿಪತ್ತು.

* * *

"ವಿ. ಕೆ. ಕೃಷ್ಣಮೇನೋನ್ ಮಾಂಸ ತಿನ್ನುವುದಿಲ್ಲ, ಹೆಂಡ ಕುಡಿಯುವುದಿಲ್ಲ, ತಂಬಾಕು ಸೇವಿಸುವುದಿಲ್ಲ, ಬರೀ ಟೀ ಕುಡೀತಾರೆ, ಅಷ್ಟೆ; ಆದರೂ, ಆತನಿಗೆ ಪಾಶ್ಚಾತ್ಯರಾಷ್ಟ್ರಗಳಮೇಲೆ ಕೋಪ ವಿಪರೀತ" ಎಂದು, ಅಮೇರಿಕದ ಟೈಂ ಪತ್ರಿಕೆ ಟೀಕಿಸಿದೆ. ಹಾವೂ ಅಷ್ಟೆ!....ಆದರೆ, ತುಳಿದಾಗ, ಅದಕ್ಕೂ ಕೋಪಬರುತ್ತೆ.

* * *

ಓದುವುದಕ್ಕೂ ಬರೆಯುವುದಕ್ಕೂ ನನಗೆ ಹೆಚ್ಚು ಅವಕಾಶಬೇಕಾಗಿರುವುದರಿಂದ ನಾನು ಪ್ರಧಾನಮಂತ್ರಿ ಕಾಂಗ್ರೆಸ್ ಅಧ್ಯಕ್ಷ, ಎರಡು ಕೆಲಸಗಳನ್ನೂ ನಿರ್ವಹಿಸಲಾರೆ, ಎಂದು ಜವಾಹರಲಾಲರು ಹೇಳಿದರಷ್ಟೆ. ನಮ್ಮೂರಿನ ಡಿಗ್ರೀಧಾರಿಯೊಬ್ಬ ಪತ್ರ ಬರೆದು, "ಓದದೆ ಬರೆಯದೆ ವಿದ್ಯಾಪಾರಂಗತನಾಗುವ ತಂತ್ರ"ವನ್ನು ತಾನು ತಿಳಿಸುವುದಾಗಿ ಗುಪ್ತವಾಗಿ ಹೇಳಿರುವನಂತೆ.

* * *

ಇಂಡಿಯಾ ಚೀಣಗಳು ಸಾರುತ್ತಿರುವ 'ಪಂಚ-ಶೀಲ'ವೇ ಅಮೇರಿಕಾದ 'ಲಂಚ-ಶೀಲ'ಕ್ಕಿಂತ ವಿಶ್ವಶಾಂತಿಗೆ ಸಹಾಯಕ, ಎಂದು ಹಲವು ಆಂಗ್ಲ ಪತ್ರಿಕೆಗಳು ಲೇಖನ ಬರೆದಿವೆ.

* * *

ನವೆಂಬರ್ ಒಂದನೇ ತಾ|| ಇಂಡಿಯಾದೇಶದಿಂದ "ಪರಂಗಿ"ಯವರು ಕಾಲ್ಕಿಗೆ ಯುತ್ತಾರೆ....ಏಕೆಂದರೆ, ಫ್ರಾನ್ಸ್‌ಸೇ ಫ್ರಾಂಕ್‌ರ ದೇಶ; ಫ್ರಾಂಕ್ ಎಂಬುದನ್ನೇ ನಾವು ಪರಾಂಕ್, ಪರಾಂಕಿ, ಪರಂಗಿ, ಎಂದು ಉಚ್ಚರಿಸುತ್ತಿದ್ದದ್ದು.

*　　　*　　　*

ಸಿಗರೇಟ್ ಸೇದುವ ಚಟವನ್ನು ಮಾನಸಿಕ ಚಿಕಿತ್ಸಾಕ್ರಮವಾದ "ಹಿಪ್ನಾಟಿಸಂ" ತತ್ವದಮೂಲಕ ಸಂಪೂರ್ಣವಾಗಿ, ಹೆನ್ರಿಬ್ಲೈತ್, ಎಂಬ ಇಂಗ್ಲೀಷ್‌ನವನು ನಿಲ್ಲಿಸಿ, ಕೀರ್ತಿಗಳಿಸಿದಾನಂತೆ ..ಇಂಗ್ಲೆಂಡಿನ ವಿಮಾನವಳದ ನೂರಾರು ನೌಕರರನ್ನು ಅವನು ತನ್ನ 'ಹಿಪ್ನಾಟಿಸಂ' ಮೂಲಕ ಸಿಗರೇಟ್ ಸೇದದಂತೆ ಮಾಡಿದಾನಂತೆ....ನಮ್ಮಲ್ಲಿ ಈ ಹಿಪ್ನಾಟಿಸಂ ಪದ್ಧತಿ ಅನೂಚಾನವಾಗಿ ಜಾರಿಯಲ್ಲಿದೆ....ಹೆಂಡತಿಯರ ಹಿಪ್ನಾಟಿಸಂ ನಿಂದಲೇ ಅನೇಕ ಗಂಡಂದಿರು ಸಿಗರೇಟನ್ನು ತೊರೆದಿರುವುದು.

*　　　*　　　*

"ಈಗ ನೀವು ಯಾವ ಯಾವ ನೌಕರಿಗಳಲ್ಲಿದೀರಿ? ಈ ನೌಕರಿಗಳ ನಿರ್ವ ಹಣೆಗೆ ನೀವು ವಿಶ್ವವಿದ್ಯಾಲಯದಲ್ಲಿ ಪಡೆದ ಶಿಕ್ಷಣ ಎಷ್ಟುಮಟ್ಟಿಗೆ ಪ್ರಯೋಜನಕಾರಿ ಯಾಗಿದೆ?" ಎಂದು ಇಗ್ಲೆಂಡಿನ ಡಿಗ್ರಿಧಾರಿಗಳನ್ನೆಲ್ಲ ಪ್ರಶ್ನಿಸಿ, ವರದಿ ತಯಾರು ಮಾಡುವರಂತೆ....ನಮ್ಮಲ್ಲಿ ಇಂಥ ಸಂಶೋಧನೆ ಅನಗತ್ಯ; ಡಿಗ್ರಿಧಾರಿಗಳಿಗೆ ನೌಕರಿ ಇಲ್ಲ; ಇದ್ದರೂ, ಅದಕ್ಕೂ ಶಿಕ್ಷಣಕ್ಕೂ ಸಂಬಂಧ ಇಲ್ಲ.

*　　　*　　　*

ಸ್ವರ್ಗದಲ್ಲಿ ನಾಯಿಗಳಿಗೆ ಪ್ರವೇಶವಿಲ್ಲ ಎಂದರೆ, ನಾನು ಅಲ್ಲಿಗೆ ಹೋಗುವುದೇ ಇಲ್ಲ, ಎಂದು ಲಂಡನ್ ನಗರದ ರೀಸ್ ಎಂಬ ಜಡ್ಜಿ ಹೇಳಿದರು....ಧರ್ಮರಾಯ! ....ಅಥವಾ, ಅಲ್ಲೂ, ಆತನಿಗೆ ಕಳ್ಳರ ಭಯವೋ?

*　　　*　　　*

ಡಾ|| ಅರ್ನಾಲ್ಡ್ ಟಾಯಿನ್‌ಬೀ ಅವರು ಹತ್ತು ಸಂಪುಟದ, ೩,೬೫,೦೦೦ ಮಾತುಗಳ, ತಮ್ಮ ಉದ್ಗ್ರಂಥ, "ಜಗತ್ತಿನ ಇತಿಹಾಸ"ವನ್ನು ಮೊನ್ನೆ ಮುಗಿಸಿ ದರು....ಇತಿಹಾಸ್ಯ ಎಂಬ ಒಂದೇಮಾತು ಸಾಕಾಗಿತ್ತಲ್ಲಾ.

*　　　*　　　*

ಮಾಸ್ಕೊದಲ್ಲಿ, ಬರ್ಮಾರಾಯಭಾರಿ ಏರ್ಪಡಿಸಿದ್ದ ಭೋಜನಕೂಟದಿಂದ, ಕಮ್ಯೂನಿಸ್ಟ್ ರಾಯಭಾರಿಗಳ ಪಂಕ್ತಿಯಲ್ಲಿ ಕೂಡುವುದಿಲ್ಲವೆಂದು ಘೋಷಿಸಿ, ಎದ್ದು ಹೋದ ಅಮೇರಿಕಾದ ಫ್ರಾನ್ಸಿನ ಹಾಗೂ ಬ್ರಿಟಿಷ್ ರಾಯಭಾರಿಗಳು, ಹಾಗೆ ಮಾಡಿದ್ದಕ್ಕೆ ಕಾರಣ,"ತಮ್ಮನ್ನೇ ಎಲ್ಲಿ ತಿಂದುಹಾಕಿಬಿಡುತ್ತಾರೋ, ಎಂಬ ಭಯ"ವೇ ಆಗಿತ್ತೆಂದು ಇಷ್ಟರಲ್ಲೇ ತಿಳಿಸುತ್ತಾರಂತೆ.

*　　　*　　　*

ಗುಲಾಮಸಂತತಿ

ಖುತ್ಬುದ್ದೀನ್‌ನಿಂದ ಗುಲಾಮಸಂತತಿ ಪ್ರಾರಂಭವಾಯಿತು, ಎನ್ನುತ್ತಾರೆ, ನಮ್ಮ ಚರಿತ್ರೆ ಮೇಷ್ಟರು. ಸುಳ್ಳು!

ನಾವಿದೇವಲ್ಲಾ, ಮಕ್ಕಳು, ಹುಡುಗರು, ಹುಡುಗಿಯರು, ಪ್ರತಿಮನೆಯಲ್ಲೂ, ನಾವೇ ಆ ಗುಲಾಮಸಂತತಿ. ಆ ಗುಲಾಮರನ್ನು ಬೆಲೆಕೊಟ್ಟು ಕೊಂಡುಕೊಂಡದ್ದರಿಂದ, ಅವರನ್ನ ಅವರ ಒಡೆಯರು ಚೆನ್ನಾಗಿ ಕಾಪಾಡಿ ಪೋಷಿಸುತ್ತಿದ್ದರು, ದುಡಿಯುವ ಎತ್ತುಗಳನ್ನು ಪೋಷಿಸುವ ಹಾಗೆ. ನಮಗೆ ಅಷ್ಟುಕೂಡ ದೊರೆಯುತ್ತಿಲ್ಲ.

ಊಟ ಏನೋ ಹಾಕುತ್ತಾರೆ; ಅಂಗಿ ತೊಡಿಸುತ್ತಾರೆ; ಮುತ್ತು ಕೊಡುತ್ತಾರೆ; ಹಬ್ಬಮಾಡುತ್ತಾರೆ; ಒಡವೆ ಇಕ್ಕುತ್ತಾರೆ; ಎರೆಯುತ್ತಾರೆ; ಎತ್ತಿ ಆಡಿಸುತ್ತಾರೆ;— ಅದನ್ನೆಲ್ಲ ಇಲ್ಲ ಎನ್ನುವುದಿಲ್ಲ, ನಾನು.

ಆದರೆ, ನಮಗೆ ಸ್ವಾತಂತ್ರ್ಯ ಕಡಿಮೆ. ಮುಖ್ಯವಾದ ವಿಷಯಗಳಲ್ಲೆಲ್ಲ ಇಲ್ಲವೆಂದೇ ಹೇಳಬಹುದು. ತಂದೆತಾಯಿ ಮಾಧ್ವರಾದರೆ, ನಾವೂ ಮಾಧ್ವರಾಗಿಯೇ ಇರಬೇಕಂತೆ; ಅವರು ಸನಾತನ ಶಾಸ್ತ್ರಪದ್ಧತಿಗಳನ್ನು ಚಾಚೂತಪ್ಪದೆ ನಡೆಸಿದರೆ, ನಾವೂ ಹಾಗೆಯೇ ನಡೆಸಬೇಕಂತೆ; ಅವರು ಈರುಳ್ಳಿ ತಿನ್ನದೆ ಇದ್ದರೆ, ನಮಗೂ ಅದು ಸಿಗುವಂತಿಲ್ಲ.

ಅವರಿಗೆ ಜಾತ್ಯಭಿಮಾನ ಜಾತಿದ್ವೇಷವಿದ್ದರೆ, ನಮಗೂ ಅವುಗಳನ್ನಂಟಿಸುತ್ತಾರೆ; ಅವರ ಕಸುಬನ್ನೇ ನಾವೂ ಕಲಿಯಬೇಕು; ಅವರು ಆಡುವ ಭಾಷೆಯನ್ನೇ ಅಷ್ಟೇ ಹೊಲಸಾಗಿ ನಾವೂ ಆಡಬೇಕು.

ಅವರ ಹೆದರಿಕೆಗಳನ್ನೆಲ್ಲ ಅವರು ನಮಗೂ ಅಂಟಿಸುತ್ತಾರೆ; ಕತ್ತಲಾದರೆ, ಗುಮ್ಮನಕಾಟ ಉಂಟು ಎಂದು ಅವರು ನಮ್ಮನ್ನು ನಂಬಿಸಿ ನಮ್ಮನ್ನು ಅಂಜಿಸುತ್ತಾರೆ. "ಪೋಲೀಸಿನವನಿಗೆ ಹಿಡಿದುಕೊಡುತ್ತೇನೆ", "ಲೋ! ಇವನನ್ನು ಹಿಡಿದುಕೊಂಡು ಹೋಗೋ", "ನಿನ್ನನ್ನ ಇಲ್ಲೇ ಬಿಟ್ಟುಬಿಡುತ್ತೇವೆ", "ನೀನು ಮಾವನಮನೆಯಲ್ಲೇ ಇರು", ಎಂದೆಲ್ಲ ಅವರು ಹೆದರಿಸಿ ನಮ್ಮನ್ನು ವಿನಾಕಾರಣ ಪೀಡಿಸುತ್ತಾರೆ ನಮ್ಮ ವ್ಯಕ್ತಿತ್ವವನ್ನು ಬೈದು ಬೈದು ಹಾಳುಮಾಡುತ್ತಾರೆ, "ನಿನಗೆ ಗೊತ್ತಾಗುವುದಿಲ್ಲ", "ಅದೆಲ್ಲ ನಿನಗೆ ಯಾಕೆ?", "ನಾನು ಹೇಳಿದ್ದನ್ನು ಕೇಳು", "ನಾಲಗೆ ಕಿತ್ತುಬಿಡು

ತ್ತೀನೆ", "ಚರ್ಮ ಸುಲಿದುಬಿಡುತ್ತೀವೆ" ಎಂದೆಲ್ಲ ಗದರಿಸಿ ಕೋಲು ಹಿಡಿದು ಏರಿ ಬರುತ್ತಾರೆ.

ಊಟ ಹಾಕುವವರು ಅವರು; ಹಸಿವಿನಿಂದ ಬಳಲಿ ಬೆಂಡಾದ ನಾವು ಅವರ ಕೈ ಕಾಯದೆ ವಿಧಿ ಇಲ್ಲ. ಆದ್ದರಿಂದ, ಕೂಳಿಗೋಸ್ಕರ ನಾವು ಇಷ್ಟು ಹಿಂಸೆಯನ್ನೂ ನುಂಗಿ ಸುಮ್ಮನಿರಬೇಕಾಗುತ್ತದೆ. ಅವರನ್ನು ಮಾತ್ರ ಯಾರಾದರೂ ಹೊಡೆದರೆ ಬೈದರೆ, ಅವರಿಗೆ ರೇಗುತ್ತೆ, ಕೋರ್ಟು ಕಚೇರಿ ಹತ್ತಿ ಸೇಡು ತೀರಿಸಿಕೊಳ್ಳುತ್ತಾರೆ. ಆದರೆ, ನಮ್ಮನ್ನ ಬೈದು ಬಡಿದರೆ, ಗಟ್ಟಿಯಾಗಿ ಮನಃಪೂರ್ತಿ ಅಳುವುದಕ್ಕೂ ಅವರು ಅವಕಾಶಕೊಡುವುದಿಲ್ಲ. ಅಳು ನಿಲ್ಲಿಸುವವರೆಗೂ ಹೊಡೀತಾರೆ.

ಇನ್ನೊಂದು ಇವರ ಮದ: ಹೀಗೆ ನಾವು ನಿಮಗೆ ತೊಂದರೆ ಕೊಡುವುದೆಲ್ಲ ನಿಮ್ಮ ಒಳ್ಳೆಯದಕ್ಕಾಗಿಯೇ ಕಾಣಿರೋ; ಎಂದು ಹೇಳಿ, ಅಪಮಾನಪಡಿಸುತ್ತಾರೆ ನಮ್ಮನ್ನು ಹೊತ್ತು ಹೆತ್ತು ಪೋಷಿಸಿದರಂತೆ; ಆದ್ದರಿಂದ, ನಾವು ಅವರಿಗೆ ಚಿರಋಣಿಗಳಾಗಿರಬೇಕಂತೆ. ನಾವೇನಾದರೂ, ಅವರನ್ನ ಅಂಗಲಾಚಿ ಬೇಡಿಕೊಂಡೆವೇನು? ಈ ತಾಪತ್ರಯಮಯ ಜಗತ್ತಿನಲ್ಲಿ ಜನಿಸಿ ಒದ್ದಾಡುವುದಕ್ಕೆ ದಯವಿಟ್ಟು ನಮಗೆ ಅವಕಾಶ ಕೊಡಿರೋ, ಎಂದು. ಅವರೇ ಸ್ವತಃ ಖುಷಿಯಾಗಿ ಮದುವೆಮಾಡಿಕೊಂಡರು; ಮೆರವಣಿಗೆ ಹೊರಟರು; ಹಸೇಮೇಲೆ ಕೂತರು; ಮಕ್ಕಳನ್ನು ಪಡೆದರು. ನಾವೇನಾದರೂ ಅವರನ್ನು ಪ್ರಾರ್ಥಿಸಿಕೊಂಡೆವೇನು?

—ಪಾಪು.



ನಿಮ್ಮ ಮೊದಲ ದೀಪಾವಳೀ ಹಬ್ಬದಲ್ಲಿ, ನಮ್ಮಮ್ಮ ಮಾಡಿದ ಅಡಿಗೆ ಜ್ಞಾಪಿಸಿಕೊಂಡು ಈಗ ಊಟ ರುಚಿಯಿಲ್ಲ ಅಂದರೆ ನಾನೇನು ಮಾಡಲಿ ಅಂದ್ರೆ!

—ಆ ವಯಸ್ಸಿನಲ್ಲಿ ಎಲ್ಲವೂ ರುಚಿ ಅಲ್ಲವೇ?

ಅಶೋಕನ ಶೋಕ

ಅಶೋಕಚಕ್ರವರ್ತಿಯ ಆಸ್ಥಾನದಲ್ಲಿ ಗೊಂದಲವೋ ಗೊಂದಲ. ಪ್ರಿಯದರ್ಶಿ ದೇವಾನಂದಪ್ರಿಯ ಮುಂತಾದ ಬಿರುದುಗಳಿಂದ ಚತುಸ್ಸಮುದ್ರ ಪರ್ಯಂತ ರಾರಾಜಿಸುತ್ತಿದ್ದ ಮಹಾರಾಜರು 'ಸಂನ್ಯಾಸ' ದೀಕ್ಷೆಯನ್ನು ತೆಗೆದು, ಅರಣ್ಯಕ್ಕೆ ತೆರಳುವ ಬೆದರಿಕೆಯನ್ನು ಮಂತ್ರಿ ಪರಿಷತ್ತಿನ ಮುಂದೆ ಮಂಡಿಸಿದ ಸುದ್ದಿ ಪಾಟಳೀಪುತ್ರದ ಜನಸ್ತೋಮಕ್ಕೆ ತಿಳಿದುಹೋಯಿತು.

ಪ್ರಕರಣ ಇಷ್ಟೇ: ಧರ್ಮಲಿಪಿಗಳನ್ನು ತಯಾರಿಸಿ, ಅವನ್ನು ಭಾರತದ ನಾನಾ ಪ್ರದೇಶಗಳ ಶಿಲಾಫಲಗಳ ಮೇಲೂ ಶಿಲಾಸ್ತಂಭಗಳ ಮೇಲೂ ಬರೆಯುವಂತೆ, ಚಕ್ರವರ್ತಿಗಳು ಆಜ್ಞೆಮಾಡಿದರಲ್ಲವೆ? ತಕ್ಷಣ, ಪರಿಷತ್ತಿನಲ್ಲಿ, ಹಾಹಾಕಾರ ಎದ್ದಿತು.

ಸದರಿ ಕಾರ್ಯಕ್ರಮಕ್ಕೆ ತಗಲುವ ಹಣ ಎಷ್ಟು, ಲಿಪಿಕಾರರಿಗೆ ಸಂಬಳ ಎಷ್ಟು ಸಂಭಾವನೆ ಪ್ರಯಾಣದವೆಚ್ಚ ಉಳಿಯ ಬೆಲೆ, ಇತ್ಯಾದಿಗಳೆಷ್ಟು, ಲಿಪಿಕಾರರ ಜಾತಿ ಎಂಥದ್ದು, ಅವರ ಸ್ವದೇಶ ಯಾವುದು, ಎಂಜಿನೀರಿಂಗ್ ಇಲಾಖೆಗೂ ಧರ್ಮದ ಇಲಾಖೆಗೂ ಇರುವ ಸಂಬಂಧ, ಸಂಪರ್ಕ ವೈಮನಸ್ಯ ನೀರಸ ಮನೋಭಾವಗಳ ಮೇಲೆ ನೇಮಕವಾದ ಸಮಿತಿಯ ವರದಿಯನ್ನು ಏಕೆ ಪ್ರಕಟಿಸಲಿಲ್ಲ, ಎಂಬಿವೇ ಮುಂತಾದ ಪ್ರಶ್ನೆಗಳಿಂದ ವಾತಾವರಣ ಕಲುಹಿತವಾಯಿತು.

ಧರ್ಮಲಿಪಿಗಳಲ್ಲಿ ಪ್ರತಿಪಾದಿತವಾಗಿರುವ ಧರ್ಮ ಯಾವುದು? — ಎಂದು ಅನೇಕ ಶಾಸ್ತ್ರಿಗಳೂ ಪಂಡಿತರೂ, ತೀವ್ರವಾದಿಗಳೂ, ವಾಮಾಚಾರದವರೂ, ಘಂಟಾಕರ್ಣರೂ, ಆಷಾಢಭೂತಿಗಳೂ, ಉಪಾಯ ವೇದಾಂತಿಗಳೂ ಟೀಕಿಸಿದರು. ಅದು ವೈದಿಕವೂ ಅಲ್ಲ, ಬೌದ್ಧವೂ ಅಲ್ಲ, ಜೈನವೂ ಅಲ್ಲ, ಶೈವವೂ ಅಲ್ಲ, ಭಾಗವತವೂ ಅಲ್ಲ, ಅದರಲ್ಲಿ ಖಚಿತವಾದ ತತ್ವಗಳಿಲ್ಲ, ಕಟುವಾದ ಮಾತೇ ಇಲ್ಲ, ಕಟ್ಟಿಲ್ಲ, ನಿಟ್ಟಿಲ್ಲ, ಲಂಗಿಲ್ಲ, ಲಗಾಮಿಲ್ಲ, ಹುಳಿ ಇಲ್ಲ, ಖಾರವಿಲ್ಲ; ಎಲ್ಲ ಧರ್ಮಗಳ ಎಲ್ಲ ಮತಗಳ ಎಲ್ಲ ದೃಷ್ಟಿಗಳ ನಿಸ್ಸಾರ ಸರ್ವಸ್ವ ಎಂದರೆ, ಅದು ತೀರ ಖಂಡನೀಯ; ಅದರಿಂದ, ಜನರು ಕಕ್ಕಾಬಿಕ್ಕಿಯಾಗುವರು, ಚೆಲ್ಲಾಪಿಲ್ಲಿಯಾಗುವರು, ಸಂಶಯಗ್ರಸ್ತರಾಗುವರು, ಸಂದೇಹ ಪೀಡಿತರಾಗುವರು; ಧರ್ಮ ತೀಕ್ಷ್ಣವಾಗಿರಬೇಕು; ಅದಕ್ಕೆ ಮೊನೆ ಇರಬೇಕು, — ಎಂದು ಪಾಟಲಿಪುತ್ರದ ಚೌಕ ಚೌಕದಲ್ಲೂ ಭಾಷಣಗಳಾಗಿ, ಬೀದಿ ಬೀದಿಯಲ್ಲೂ ಮೆರವಣಿಗೆ ಹೊರಟಿತು.

ಶಾಸನಗಳನ್ನು ಬ್ರಾಹ್ಮಣರು ಬರೆದರೆ? ಭಿಕ್ಷುಗಳು ರಚಿಸಿದರೆ? ಗೃಹಸ್ಥರು ಗೀಚಿದರೆ? ಹಳ್ಳಿಗರಿಗಾಗಿ ಹೆಣೆದರೆ? ಪಟ್ಟಣಿಗರಿಗಾಗಿ ಪರಚಿದರೆ? ಉತ್ತರಭಾರತದ ಆದರ್ಶಗಳು ದಕ್ಷಿಣಭಾರತಕ್ಕೆ ಸರಿಹೋಗುತ್ತವೆಯೆ? ಬ್ರಾಹ್ಮಣ ಶ್ರಮಣರನ್ನು ಪೂಜಿಸಿರಿ, ಎಂದು ಪದೇ ಪದೇ ಹೇಳುತ್ತಿದ್ದರೆ, ಅಬ್ರಾಹ್ಮಣರಿಗೂ ಅಶ್ರಮಣರಿಗೂ ಅಸಮಾಧಾನವಾಗುವುದಿಲ್ಲವೇ? ಧರ್ಮಲಿಪಿಯನ್ನು ಓದಿದವರಿಗೆಲ್ಲ ಅಲ್ಪಸ್ವಲ್ಪ ಹಣ ಕೊಡಬೇಡವೆ? ಅದನ್ನು ವಿವರಿಸಿ ವ್ಯಾಖ್ಯಾನಮಾಡಿದವರಿಗೆ ಪರಿಹಾರ ಎಷ್ಟು? ಅಷ್ಟು ಸಾಕೆ? ಅದಕ್ಕಿಂತ ಕಡಮೆ ಸಾಲದೆ? ಅದರಲ್ಲಿ ಆಯಾ ಪ್ರಾಂತದ ಅಧಿಕಾರಿಗಳಿಗೆ ದೊರೆಯುವ ಕಮಿಷನ್ ಎಷ್ಟು? ಎಂದೆಲ್ಲ ಕುಹಕದ ಕಿಡಿಗಳು ಗಗನಕ್ಕೇರಿದವು.

ತಂದೆತಾಯಿಗಳನ್ನು ಶುಶ್ರೂಷಿಸಿ, ಗುರುಹಿರಿಯರನ್ನು ಶುಶ್ರೂಷಿಸಿ, ಎಂದು ಶಾಸನಗಳಲ್ಲಿರುವುದನ್ನೂ ಅನೇಕರು ಟೀಕಿಸಿದರು. ಹಾಗೆಂದರೆ, ತಾವು ಅವರನ್ನು ಶುಶ್ರೂಷಿಸುತ್ತಿಲ್ಲವೆಂಬ ಅರ್ಥ ಬರುವುದಿಲ್ಲವೆ? ರಾಜಾಜ್ಞೆಯಿಂದಲೇ ನಾವು ಅವರನ್ನು ಗೌರವಿಸುತ್ತಿದೇವೆ, ಎಂಬ ಅಭಿಪ್ರಾಯ ಪರದೇಶದವರಿಗೆ ಬರುವುದಿಲ್ಲವೆ? ಧರ್ಮಲಿಪಿಯಿಂದ ಶಿರೋಲಿಪಿಯನ್ನು ತಿದ್ದಲು ಸಾಧ್ಯವೆ? ದಾಸಭೃತ್ಯರನ್ನು ಶುಶ್ರೂಷಿಸಿ, ಎಂದು ಶಾಸನಗಳಲ್ಲಿ ಬರೆದಿರುವುದರಿಂದ, ದಾಸರೂ ಭೃತ್ಯರೂ ಕೊಬ್ಬಿ ಕಂಟಕರಾಗುವುದಿಲ್ಲವೆ? ಅಶೋಕ ಚಕ್ರವರ್ತಿಯ ತಾಳಕ್ಕೆ ತಕ್ಕಂತೆ ಬುದ್ಧಿವಂತರೂ ಕುಣಿಯಬೇಕೆ? ಕಂಬ ನೆಟ್ಟರೆ, ಧರ್ಮ ನಿಲ್ಲುತ್ತದೆಯೆ? ಶಾಸನದಿಂದ ಜನಜೀವನವನ್ನು ತಿದ್ದಲು ಸಾಧ್ಯವೆ? ಶಾಸನಗಳನ್ನು ಬರೆಯಿರಿ, ಕಲ್ಲಿನಮೇಲೆ ಕೊರೆಯಿರಿ, ಎಂದು ಜನರು ಕೇಳಿದರೆ? ಮಹಾಸಭೆಗಳು ಠರಾವು ಮಾಡಿದುವೆ? ನಿಯೋಗಗಳು ಬೇಡಿಕೆ ಇತ್ತುವೆ? ಮಂತ್ರಿಪರಿಷತ್ತು ಒತ್ತಾಯಪಡಿಸಿತೆ? ಮಹಾನುಭಾವರು ಉಪವಾಸ ಬಿದ್ದರೆ? ಸಂಸ್ಕೃತದ ಮೂಲಕ ಸಂಸ್ಕೃತಿಪ್ರಸಾರವೇ ಹೊರತು, ಪ್ರಾಕೃತದಿಂದ ಪ್ರಕೃತಿಯನ್ನು ವಿಕೃತಿಗೊಳಿಸಲಾದೀತೆ? — ಎಂದೆಲ್ಲ ಜಾಣರೂ ಜನಪ್ರಿಯರೂ ಆದ ಕುಶಾಗ್ರಮತಿಗಳು ಕುಹಕ ಹೂಡಿದರು.

ತಮ್ಮ ಮಾತಿಗೆ ವಿರೋಧವಾಗಿ, ಧರ್ಮಶಾಸನಗಳನ್ನು ಪ್ರಸಾರಮಾಡಿದರೆ, ಅಶೋಕ ಚಕ್ರವರ್ತಿಯ ಹೆಸರು ಎಂದೆಂದಿಗೂ ಕಳಂಕಪೂರಿತವಾಗುವುದು, ಭಾರತದ ಇತಿಹಾಸದಲ್ಲಿ ಆತನಿಗೆ ಸ್ಥಾನವೇ ದೊರೆಯುವುದಿಲ್ಲ, ಕುವರ್ಣಾಕ್ಷರದಲ್ಲಿ ಆತನನ್ನು ಕುಟ್ಟುತ್ತಾರೆ, ಆಸೇತು ಹಿಮಾಚಲ ಆತನನ್ನು ಅವಹೇಳನಮಾಡುತ್ತಾರೆ, ಎಂದೆಲ್ಲ ಭೀಷಣ ಭಾಷಣಗಳಾದುವು.

ಅಶೋಕ ಚಕ್ರವರ್ತಿ....ಕಡೆಗೂ, ಸನ್ಯಾಸಿ ಆಗಲಿಲ್ಲ; ಅರಣ್ಯಕ್ಕೆ ಹೋಗಲಿಲ್ಲ; ಯಾವುದೋ ಮತದವರು ಬರೆದು ತಯಾರಿಸಿದ ಶಾಸನಗಳನ್ನು ಯಾವುದೋ ಜಾತಿಯವರ ಕೈಯಿಂದ ಎಷ್ಟೋ ಹಣ ವೆಚ್ಚದಲ್ಲಿ ಎಲ್ಲೆಲ್ಲೋ ಬರೆಯಿಸಿ ಯಾರು ಯಾರನ್ನೋ ಚೇತನಗೊಳಿಸಿ, ಭಾರತದ ಇತಿಹಾಸದಲ್ಲಿ ಹೇಗೋ ಉಳಿದ.

—ರೇವಣ್ಣ.

ಕನ್ನಡನಾಡಹಬ್ಬ—ಒಂದು ಸರ್ವೆ

ಮೊನ್ನೆ ನಮ್ಮೂರ 'ನಾಡಹಬ್ಬದ ಕಾರ್ಯಕ್ರಮಗಳು ನಡೆಯುತ್ತಿದ್ದ' ಶಾಲೆಗೆ ಹೋದೆ. ಸಂಜೆಹೊತ್ತು. ಅಂಗಳದ ತುಂಬ ಜನತುಂಬಿತ್ತು; ಹೈದರಾಬಾದಿನ ಕನ್ನಡಿಗರಲ್ಲಿ ಉತ್ಸವಾಭಿಮಾನ ವಿಪರೀತವೆಂಬುದು ಯಾರಾದರೂ ಕಾಣಬಹುದಾಗಿತ್ತು.

ಕಾರ್ಯಕ್ರಮವೇನೋ ಆರಂಭವಾಯಿತು. ಆದರೆ ಗದ್ದಲ—ಸಭಿಕರದು—ಭಾಷಣಕಾರರದಕ್ಕಿಂತ ಜಾಸ್ತಿಯಾಗಿತ್ತು. ಆದ್ದರಿಂದ ನನ್ನ ದೃಷ್ಟಿ ಎರಡನೆಯ ವರ್ಗದಕಡೆ ಹೋಯಿತು. ಇದೇ ಸಮಯವೆಂದು ಒಂದು ಸ್ಯಾಂಪಲ್‌ಸರ್ವೆ ನಡೆಸಿದೆ. ಸಾರಾಂಶ:—

೧. ನನ್ನ ಪಕ್ಕದ ಆಸಾಮಿ ಅವನ ಪಕ್ಕದವನನ್ನು ಕೇಳಿದ. ಭಾಷೆ ಮರಾಠಿ:
"ಉಪನ್ಯಾಸ ಕರೀತ ಅಸಿಣಾರ ಕೋಣ್!"
"ಕೋಣಿ .. ಎಸ್. ವಿ. ಪ. ಭಟ್ಟ ಮ್ಹಣೆ ಮೈಸೂರಚ ಅಸತೀಲ"
"ಕೋಣ್? ಎಸ್. ವ್ಹೀ...." "ಹೋಯ್...."
—ಇಂತಹ ಮಂದಿ ಸುಮಾರು ಶೇ. ೩೦%

೨. ಇನ್ನೊಬ್ಬಾತ ಮೀಸೆ ಜೋರಿತ್ತು. ಪಕ್ಕದಾತನನ್ನು ಕೇಳಿದ: 'ಎವರ್ರಾ ಅದಿ ಮಾಟಲಾಡೇದಿ .. ?'—ಇಂತಹ ಜನ ಸುಮಾರು ಶೇ. ೨.

೩. ಒಬ್ಬಾತ ಅನ್ನುತ್ತಿದ್ದ; ಅವನ ತಾಯಿನುಡಿ ಕನ್ನಡವಾಗಿತ್ತಂತೆ, ಅವನ ಅಜ್ಜಂದಿರ ಕಾಲದಲ್ಲಿ. ಆದರೆ ಈಗ ಕೇವಲ ಮಾತುಮಾತ್ರ ಅರ್ಥವಾಗುತ್ತೆ; ಮಾತನಾಡಲು ಬರೊಲ್ಲ. ಮಾತುಕತೆಯೆಲ್ಲ ಮರಾಠಿಯೇ ಈಗ—ಇಂಥ ಶೇ. ೧೦%

೪. ಸ್ವಲ್ಪ ಪಕ್ಕದಲ್ಲಿಂದ ಬರುತಿತ್ತು. 'ಜೀ... ಮಿಸ್ಟರ್....ಜರಾ ಬಾಜು ಹಟೋ; ಇಧರ್ ಕೋಯೀ ಖಡೆ ನಹಿರಹನಾ....ಮೆಹರ್ ಬಾನಿ ಕರ್‌ಕೇ ಬೈಟ್ ಜಾಯಿಯೆ.—ಈತ ವಾಲಂಟಿಯರ್—ಕಚ್ಚೆ ಪಂಚೆ ಉಟ್ಟಿದ್ದ; ಎದೆಯಮೇಲೆ ಬ್ಯಾಡ್ಜ್. ಅದರಮೇಲೆ 'ಕನ್ನಡ ನಾಡ ಹಬ್ಬ —ಸ್ವಯಂಸೇವಕ.' ಎಂದಿತ್ತು. ಇವನೂ ಕನ್ನಡಿಗನೆ! ಆದರೆ ಉರ್ದುವಿನಲ್ಲೇ ಅವನಿಗೆ ಸಲೀಸು. ಇಂತಹರು ೧೦%

೫. ಉಳಿದ ಉಪವರ್ಗಗಳು: ಕನ್ನಡದ { ಓದುಮಾತ್ರ / ಓದು, ಬರಹ ಮಾತ್ರ / ಮಾತು ಮಾತ್ರ } ಬರುತ್ತೆ....

ಇತ್ಯಾದಿ....ಇನ್ನು ಏನೂ ವಿಶೇಷವಿಲ್ಲ ವೆನ್ನಲೆ?

ಕನ್ನಡವಮ್ಮ ಗೆಲ್ಗೆ! ಅಷ್ಟೆ. —ಬಿ. ಎಸ್. ಮೂರ್ತಿ.

ವೆಚ್ಚದ ತಪಶೀಲು

ಯಾರ ಕಾಸಾದರೂ ನಮ್ಮ ಕೈಗೆ ಬಂದರೆ ಅದನ್ನು ವೆಚ್ಚಮಾಡುವ ಕೆಲಸ ಕಷ್ಟದ್ದಲ್ಲವೆಂದು ಎಲ್ಲರಿಗೂ ಗೊತ್ತು. ಆದರೆ ಆ ವೆಚ್ಚದ ತಪಶೀಲು ಕೇಳಿದರೆನ್ನಿ; ಅದನ್ನು ಒಪ್ಪಿಸುವುದು ಮಾತ್ರ ಕಷ್ಟದ ಕೆಲಸ. ಅದಕ್ಕೆ ಪ್ರತಿಭೆ ಬೇಕು. ಹುಂ.... ನಿಜ! ಒಂದು ಬಗೆಯ ಪ್ರತಿಭೆಯೇ ಬೇಕು.

ಮೊನ್ನೆ ಮೊನ್ನೆ ಪೇಪರಿನಲ್ಲಿ ಈ ಸಮಾಚಾರ ಓದಿದೆ—ಉತ್ತರ ಕೆನಡಾದ, ಹಿಮಗಡ್ಡೆಗಳಿರುವ ಒಂದು ಪ್ರದೇಶದಲ್ಲಿ, ವೈಮಾನಿಕರು ಕೆಲವರು ಏನೋ ಗಂಡಾಂತರಕ್ಕೊಳಗಾಗಿ ಸಿಕ್ಕಿಬಿದ್ದಿದ್ದರು. ಅವರು ಇಂಥಾ ಸ್ಥಳದಲ್ಲಿದಾರೆ ಎಂದು ಪತ್ತೆ ಹಚ್ಚುವುದಕ್ಕಾಗಿ ನ್ಯೂಯಾರ್ಕಿನ ಪತ್ರಿಕೋದ್ಯೋಗಿಯೊಬ್ಬನನ್ನು ಕಳುಹಿಸಿದ್ದರು. ಸಾಹಸದ ಕೆಲಸವೇನೋ ಹೌದು. ಆದರೂ ಆ ಮಹರಾಯ ಹಿಂದಿರುಗಿ ಬಂದವನು 3000 ಡಾಲರುಗಳಷ್ಟು ಖರ್ಚಾಯಿತೆಂದು ಲೆಕ್ಕ ತೋರಿಸಿದಾಗ, ಅವನನ್ನು ಕಳುಹಿಸಿದ ಪತ್ರಿಕಾ ಕಚೇರಿಯವರು ಹೌಹಾರಿ, ಹುಬ್ಬುಗಂಟಿಕ್ಕಿ, ಖರ್ಚಿನ ತಪಶೀಲು ಕೊಡು ಎಂದು ಥರಾಟೆಗೆ ತೆಗೆದುಕೊಂಡರು. ಈ ಸಾಹಸಿ ಹಿಂಜರಿಯುತ್ತಾನೆಯೇ? ತಪಶೀಲು ತಯಾರಿಸಿ ಮುಂದಿಟ್ಟ. ವಿವರಗಳನ್ನೆಲ್ಲ ಒದಗಿಸಿದ. ಎಷ್ಟೆಂದರೂ ಪತ್ರಿಕಾ ಸಾಹಿತಿ ನೋಡಿ! ಅವನ ತಪಶೀಲಿನಲ್ಲಿ ಒಂದಂಶ ಹೀಗಿತ್ತು—

ವೈಮಾನಿಕರನ್ನು ಹುಡುಕಲು ನಾಯಿಗಳ ಮಂದೆಯೊಂದರ ನೆರವು ಬೇಕಾಯಿತಂತೆ. ಅದಕ್ಕಾಗಿ ಖರ್ಚು. ಆ ನಾಯಿಗಳಲ್ಲಿ ಒಂದಕ್ಕೆ ಖಾಯಿಲೆ ಬಂತು. ಅದರ ಔಷಧೋಪಚಾರಕ್ಕೆ ಖರ್ಚು. ಕೊನೆಗೆ ಆ ನಾಯಿ ಸತ್ತೇ ಹೋಯಿತು. ಅದಕ್ಕೆ ಯಥೋಚಿತ ಶವಸಂಸ್ಕಾರ ಮಾಡಲು ಖರ್ಚು. ಅಷ್ಟಕ್ಕೇ ಮುಗಿಯಿತೆ? ಇಲ್ಲ ಏಕೆಂದರೆ, 3000 ಡಾಲರಿನ ಲೆಕ್ಕ ಭರ್ತಿಯಾಗಬೇಕಲ್ಲ! ಅದಕ್ಕಾಗಿ ಇನ್ನೊಂದು ಖರ್ಚನ್ನೂ ತೋರಿಸಬೇಕಾಯಿತು. ಪ್ರಾಣನಾಥನನ್ನು ಕಳೆದುಕೊಂಡ ಶುನಕ ಸ್ತ್ರೀಯ ಸಾಂತ್ವನಕ್ಕಾಗಿ ಪುಷ್ಪಗುಚ್ಛಗಳನ್ನು ಅರ್ಪಿಸಲು 60 ಡಾಲರು ಖರ್ಚಾಯಿತೆಂದು ತೋರಿಸಿ ಗೆದ್ದೆನೆಂದುಕೊಂಡನಂತೆ ಆ ಮಹಾವೀರ. ಹೂ ಮಾರಾಟದ ಮೇಲೆ ಸೇಲ್ಸ್ ಟ್ಯಾಕ್ಸ್ ಇಲ್ಲವೆಂದು ಕಾಣುತ್ತೆ ಅಮೇರಿಕದಲ್ಲಿ!

ಇದನ್ನು ಓದಿದಾಗ ಕಳೆದ ಚುನಾವಣೆಯಲ್ಲಿ ನನಗುಂಟಾದ ಅನುಭವ ಜ್ಞಾಪಕಕ್ಕೆ ಬಂತು. (ನಾನು ಇಡುಗಂಟು ಕಳೆದುಕೊಂಡ ವಿಚಾರ ತಮಗೆಲ್ಲಾ

ವೇದ್ಯವಿರಬಹುದೆಂದು ಭಾವಿಸುತ್ತೇನೆ). ಚುನಾವಣೆ ಮುಗಿದಮೇಲೆ ಎಲ್ಲಾ ಕಡೆಗಳಿಂದಲೂ ವೆಚ್ಚದ ತಪಶೀಲುಗಳು ಬಂದುವು. ನನಗಾಗಿ ಕೆಲಸ ಮಾಡಿದ ಎಲ್ಲ ಬಗೆಯ ಹಿಂಬಾಲಕರೂ, ಬೀದಿ ಅರಚಕರೂ, ಭಾಷಣಕಾರರೂ, ಹೋಟೆಲಿನವರೂ ಬಂದು—"ನೀವು ಮುಂದಾಗಿ ಕೊಟ್ಟಿದ್ದು ಇಂತಿಷ್ಟು—ಬಾಕಿ ಇಂತಿಷ್ಟು" ಎಂದು ತಪಶೀಲು ತೋರಿಸಿ ಕೈನೀಡಿದರು. ಆ ಪಟ್ಟಿಗಳಲ್ಲಿಯೋ, ಬೆಂಡಿನ ಹಾರದಿಂದ ತೊಡಗಿ ಮುಂಡ್ಯದ ಬೆಣ್ಣೆಯವರೆಗಿನ ಸಕಲ ವಸ್ತುಗಳೂ ನಮೂದಿಸಲ್ಪಟ್ಟಿದ್ದವು. ನನ್ನ ಚುನಾವಣೆಯ ಗುರುತು ಗಾರ್ಧಭದ್ದು ಆ ಗುರುತಿನ ಪ್ರಚಾರಕ್ಕಾಗಿ **"ಗಾರ್ಧಭ ಗಾನ ಸುಧಾ ಪಾನಂ"** ಎಂಬ ಪದ್ಯ ಬರೆದುಕೊಟ್ಟ ಕಾಸುಕವಿಗೆ ಸಂಭಾವನೆ ಇಂತಿಷ್ಟು ಎಂದು ಕೂಡ ನಮೂದಿಸಿತ್ತು. ಬೂತಿಗೆ ಕುರಿಗಳನ್ನು ಎಳೆದು ತರುವ ಕೆಲಸವನ್ನು ನಿರ್ವಹಿಸಿದವನೊಬ್ಬ ಬೆಲೂನಿಗೆ ಹತ್ತಾಣೆ ಖರ್ಚಾಗಿದ್ದನ್ನು ತೋರಿಸಿದ್ದ. ಅದನ್ನು ಕಂಡು ನನಗೆ ರೇಗಿತು. ಅವನನ್ನು ಕರೆಸಿ ಕೇಳಿದೆ— ಏನೋ ಇದು, ಅಂತ. ಅವನೇನಂದ ಗೊತ್ತೆ ? ನನ್ನನ್ನೇ ಆರಿಸಿ ಕಳುಹಿಸಲು ನಿರ್ಧರಿಸಿದ್ದ ಇಬ್ಬರು ದಂಪತಿಗಳನ್ನು ಬೂತಿಗೆ ಹೊರಡಲು ಬಿಡಲೇ ಇಲ್ಲವಂತೆ —ಅವರ ಹತ್ತು ಮಂದಿ ಮಕ್ಕಳು. ಹತ್ತು ಬೆಲೂನು ತೆಗೆದುಕೊಂಡು ಒಂದೊಂದರ ಕೈಗೂ ಒಂದೊಂದು ಕೊಟ್ಟ ಮೇಲೆ ಹಠಾ ನಿಲ್ಲಿಸಿದವಂತೆ. ಆದರಿಂದ ನನಗೆರಡು ಓಟುಗಳು ಸಿಕ್ಕಿದವಂತೆ. ಹೇಗಿದೆ !

"ಆಗಲಿ, ಇನ್ನೇನಾದರೂ ಇದೆಯೇನೊ ಕಥೆ? ಓಟರುಗಳ ಮನೆ ಎಮ್ಮೆ ಅರಚೋದನ್ನ ನಿಲ್ಲಿಸುಕ್ಕೆ ಹುಲ್ಲೇನಾದರೂ ಕೊಂಡುಕೊಂಡಿಲ್ಲವೇನೋ"" ಎಂದು ಕೊಂಕಿದೆ ನಾನು.

ಆತ ಬಿಟ್ಟುಕೊಡಲಿಲ್ಲ. "ಹುಲ್ಲಲ್ಲ ಸಾರ್, ಹಗ್ಗ....ಕೊನೇಲಿ ಬರೆದಿದೀನಿ" ಅಂದ.

"ಎಮ್ಮೆ ಕಟ್ಟೋದಕ್ಕೇನು ?"

"ಅಲ್ಲಾ ಸಾರ್"

"ಮತ್ತೆ....?"

"ಒಬ್ಬಾತ ಬೂತಿಗೆ ಬರೋದಕ್ಕೆ, ಅವನ ಹೆಂಡತಿ—ಶುದ್ಧ ತಾಟಕಿ—ಬಿಡಲೇ ಇಲ್ಲ. ಹಗ್ಗ ತಂದುಕೊಟ್ಟರೆ ಇವಳನ್ನ ಕಂಭಕ್ಕೆ ಕಟ್ಟಿ ಬರ್ತೀನಿ ಅಂತಂದ. ಬೇಗನೆ ಓಡಿಹೋಗಿ ತಂದೆ ಹಗ್ಗಾನ—ಹತ್ತು ಮೊಳ....ರೂ. 3-0-0 ಕೊನೇಲಿದೆ, ನೋಡಿ ಸಾರ್".

ಹೇಗಿದೆ ತಪಶೀಲು ! ಇರೋದೇನು....ಅಷ್ಟುಕೇಳಿ ಮೂರ್ಛೆಬಿದ್ದೆ. ಎಚ್ಚರವಾದಾಗ ಅವನನ್ನು ಕರೆದು ಹೇಳಿದೆ. "ಹೋಗು....ಆ ಹಗ್ಗಾನ ಎಲ್ಲಿದೇಂತ ಹುಡುಕಿ ನೀನೇ ತಗೊ" ಅಂತ.

ಇದನ್ನೆಲ್ಲಾ ನೋಡುವಾಗ ನಿಮಗನ್ನಿಸುವುದಿಲ್ಲವೆ—ಖರ್ಚಿನ ತಪಶೀಲು ಒಂದು ಕಲೆ ಅಂತ? ಅದಕ್ಕೂ ಪ್ರತಿಭೆ ಬೇಕು ಅಂತ ನಾನಂದಿದ್ದು ತಪ್ಪೆ? ಮುಂದಿನ ನಾಗರಿಕರಿಗೆ ಈ ಕಲೆ ಚೆನ್ನಾಗಿ ತಿಳಿದಿರಬೇಡವೆ? ನಗರಗಳಲ್ಲಿ, ನಿಂತು ಕಾಲೇಜು ಹೈಸ್ಕೂಲುಗಳಲ್ಲಿ ಕಲಿಯುತ್ತಿರುವ ಹಳ್ಳಿಯ ಹುಡುಗರಿಗೆ ಈ ಕಲೆ ತಕ್ಕಮಟ್ಟಿಗೆ ಸಾಧಿಸಿರುತ್ತದೆ—ಎಲ್ಲರಿಗಲ್ಲ—ಕೇವಲ ಕೆಲವರಿಗೆ. ವೆಚ್ಚದ ತಪಶೀಲನ್ನು ಮನೆಯಲ್ಲಿರುವ ಓದು ಬಾರದ ಹಿರಿಯರಿಗೆ ಒಪ್ಪಿಸುವಾಗ ಸಿಗರೇಟಿಗೆ ರೂ. 25/8 ಎಂದು ಬರೆಯುವುದರ ಬದಲಿಗೆ "ಪ್ರಯೋಗ ಸಾಮಗ್ರಿಗಳಿಗಾಗಿ" ಇಂತಿಷ್ಟು ಎಂದು ಬರೆಯುವುದೇ ಕ್ಷೇಮವೆಂದು ಅವರು ಬಲ್ಲರು. ಇನ್ನು Time Table—ಇತ್ಯಾದಿಗಳಿಗಾಗಿ ಬೇಕಾಗುವ ಅಪಾರ ದ್ರವ್ಯವನ್ನು ನಮೂದಿಸುವವರ ವಿಚಾರ ನೀವು ಕೇಳಿದ್ದೀರಿ. ಆದರೆ ಇಷ್ಟು ಸಾಲದು. ವೆಚ್ಚದ ತಪಶೀಲು ತಯಾರಿಸುವ ಈ ಕಲೆಯನ್ನು ಶಾಸ್ತ್ರೀಯವಾಗಿ ಅಭ್ಯಸಿಸಬೇಕಾಗಿದೆ. ಅದಕ್ಕಾಗಿ ಯೂನಿವರ್ಸಿಟಿಗಳಲ್ಲಿ ಒಂದು (Chair) ಕುರ್ಚಿ ಏರ್ಪಡಿಸುವುದಾದರೂ ಸರಿಯೆ.

—ರಾಮಕೃಷ್ಣ.

ಗ್ರಂಥ ಸಂಗ್ರಹ ನೀತಿ

ಹಲವಂ ಕೆಳೆಯರ ಕೇಳಿಕೊಂಡು, ಕೆಲವಂ ಬರೆದಾತನಂ ಬೇಡುತಂ
ಕೆಲವಂ ಲೈಬ್ರೆರಿಯಿಂದ ಸೆಳೆದು, ಕೆಲವಂ ಬೆಲೆ ತೆರದಲೇ ಪಡೆಯುತಂ
ಕೆಲವಂ ಓದದ ಕುರಿಗಳಿಂದ ಕಿತ್ತು, ಕೆಲವಂ ಎಂತಾದರೂ ಹೊಡೆಯುತಂ
ಪಲವುಂ ಮಾರ್ಗದಿ ಬೇಡಿ ಕಾಡಿ, ಮನೆಯೊಳ್ ಗ್ರಂಥಾಲಯಂ ಬೆಳಸುವರ್
ಒಲವೇನ್ ವಾಣಿಗೆ ಇಂಥ ಸೇವೆ ನಿಜದೊಳ್—ಪೇಳೆನ್ನ ಕುಹಕೇಶ್ವರ.

—ರಾಮಕೃಷ್ಣ.

ಕಷ್ಟಗೊಳ್ ಬರ್ತಾವಂತೀರಾ?
ಬರ್‍ಲಿ ಅದ್ಕೇನಂತೆ!
ಕುರ್ಸಿ ಮಾತ್ರ ಆಕ್ಕೊಡ್ಬಾರ್‍ದು
ಔಗ್ಲು ಕೂರೋವಂತೆ!

(ಇಂಗ್ಲೀಸ್ನೋರ್ದಂತೆ ಈ ಮಾತು)

—ಅಳಿಗಮೂರ.

ಕವಿ ಕಾವ್ಯ ಜೀವನ

Life is one sweet-grand song ಎಂದು ಯಾವನೋ ಕವಿ-ಪುಂಗವನೋ ಕವಿಕುಲ ಲಲಾಮನೊ, ಕಾವ್ಯ ವನಮತ್ತೇಭನೋ ಹೇಳಿದ್ದಾನಂತೆ. ಜೀವನ ಕಾವ್ಯಮಯವಾದಷ್ಟೂ ಸುಸಂಸ್ಕೃತವಾಗುತ್ತದೆ. ಸಿನಿಮಾಗಳನ್ನು ಸಂಸ್ಕೃತಿ ಪ್ರಕಾರ ಸಾಧನಗಳನ್ನಾಗಿ ಮಾಡಿಕೊಳ್ಳಬೇಕು. ಏಕೆಂದರೆ ನಮ್ಮ ಇಂದಿನ ಸಿನಿಮಾಪ್ರಪಂಚ ಕಾವ್ಯಮಯವಾಗಿದೆ.

ಷೇಕ್ಸ್‌ಪಿಯರೇನಾದರೂ ದಾರಿತಪ್ಪಿ ಭಾರತೀಯ ಚಲಚ್ಚಿತ್ರ ಮಂದಿರಕ್ಕೆ ನುಗ್ಗಿದ್ದಿದ್ದರೆ ಅವನು ಕಾವ್ಯಬರೆಯುವುದನ್ನೇ ಬಿಟ್ಟು ಬಿಡುತ್ತಿದ್ದ. ಆಗ ನನ್ನಂತಹ ಬಡಪಾಯಿಗಳು ಕಾವ್ಯವನ್ನು As I like it ಓದುತ್ತಿದ್ದೆವು ಇಲ್ಲ ಬಿಡುತ್ತಿದ್ದೆವು.

ಹೀಗೆಲ್ಲಾ ನಾನು ಹೇಳುವುದಕ್ಕೆ ಒಂದು ಕಾರಣವಿದೆ. ನಮ್ಮ ಸಿನಿಮಾ ಗೀತೆಗಳನ್ನುಕೇಳಿ ನನಗೆ ಆನಂದಾಧಿಕ್ಯವಾಗಿದೆ. ಹಾ-ಊ, ಹಾ-ಊ-ಹಾ ಎಂದು ಬ್ರಹ್ಮಸಾಕ್ಷಾತ್ಕಾರ ಮಾಡಿಕೊಂಡವರು ಕೂಗುತ್ತಾರೆ ಎಂದು ಮುಂಡಕೋಪನಿಷತ್ತಿನಲ್ಲಿಯೋ, ಮಾಂಡೂಕ್ಯದಲ್ಲಿಯೋ ಯಾರೋ ಬರೆದಿದ್ದಾರೆ. ಕ್ಷಮಿಸಿ— ತಪ್ಪಾಯಿತು ಹಾಗೆ ಹೇಳಿದ್ದು. ಅದು ಸಂತೋಷಿಯವರ ಲೇಟೆಸ್ಟ್ ಪಿಕ್ಚರೂಂತ ಕಾಣುತ್ತೆ. ಅದು ಏನಾದರೂ ಆಗಿರಲಿ ಸಿನಿಮಾನೋಡಿಕೊಂಡು ಬಂದು ನಾನು ಹಾಗೇ ಕೂಗುತ್ತೇನೆ. ಸಿಟ್ಟೋ ಸಂತೋಷವೋ ಅರಿಯೆ.

ಹಾಗೇ ಪರಿಶೀಲನೆಮಾಡಿ ನೋಡಿ:—

೧) ನೋಡಿ, ಒಬ್ಬಳು ಮನೆಯ ಒಕ್ಕಲಗಿತ್ತಿ, ಬಡಾ ಬಡಪಾಯಿಯುವಳು (ಉಟ್ಟಿದ್ದು ವಾಯಿಲ್‌ಸೀರೆ!) ಅಂಥಾವಳು ಇದ್ದಕ್ಕಿದ್ದಂತೆ ಸಂತೋಷಾಧಿಕ್ಯದಿಂದಲೋ, ದುಃಖಭಾರದಿಂದಲೋ ಹಾಡಲಾರಂಭಿಸಿದಳು. ಆಶು ಕವಯಿತ್ರಿಯುವಳು. ರಾಮ್‌ಜೋಷಿ, ರಾಘವಾಂಕ ಮೊದಲಾದವರೆಲ್ಲಾ ಈ ರಜತಪರದೆಯ ರಂಭೆಯಮುಂದೆ ಒಂದು ರವೆಯಷ್ಟೂ ಇಲ್ಲ. ಅವಳು ಹಾಡು ಹೇಳುವುದನ್ನು ಪತ್ತೆ ಹಚ್ಚಿ ಯಾವುದೋ ಆರ್ಕೆಸ್ಟ್ರಾದವರು ಎಲ್ಲಿಂದಲೋ ಮೂಡಿ, ಕಾಮೆಟ್ಟಿನಿಂದಲೋ, ರಾಕೆಟ್ಟಿನಿಂದಲೋ ಶಬ್ದಕ್ಕಿಂತ ವೇಗವಾಗಿ ಹಾರಿಬಂದು ಹಾಜರಾಗಿ ಅವಳ ಆಶು ಕವಿತ್ವಕ್ಕೆ, ಆಶುಟ್ಯೂನ್‌ಗಳನ್ನು ಹಾಕಿಕೊಂಡು ಹಾರ್ಮೋನಿಯಂ ತಬಲಾಗಳನ್ನು

ಬಡಿದರು. ಇದನ್ನು ಅದು ಹೇಗೆ ಪತ್ತೆಹಚ್ಚಿದರೋ ಅರಿಯೆ ಅವರು ಷೆರ್ಲಾಕ್ ಹೋಮ್ಸಿನ ಅಜ್ಜಗಳಿರಬೇಕು—ಆ ಸಿನಿಮಾತಯಾರಕರು ಆ ಸ್ಥಳಕ್ಕೆ ಧಾವಿಸಿ ಈ ಘಟನೆಗಳನ್ನು ಆದ್ಯಂತ ಪುಣ್ಯಕಾಲವೂ ಸಿನಿಮಾ ತೆಗೆದರು.

ನಾನೂ ಕವಿಯೇ. ದಿನಗಟ್ಟಲೆ ಬರೆದು ಅಳಿಸಿದರೂ ಹತ್ತುಸಾಲಿಗೆ ಪ್ರಾಸ ಹತ್ತುವುದಿಲ್ಲ. ಅಲ್ಲದೆ ಸಿನಿಮಾ ಭಾರತೀಯರ ಕಾವ್ಯದಗಣಿಯಲ್ಲಿ ನಾನೊಂದು ಅಣು. ಅದುದರಿಂದಲೇ ಪ್ರಾಸ, ಗಾನಮಾಧುರ್ಯಗಳನ್ನು ಮರೆತು ಮಹಾ ಛಂದಸ್ಸಿನಲ್ಲಿ ಬರೆಯುತ್ತಿದ್ದೇನೆ. ಯಾರಿಗೂ ಹೇಳಬೇಡಿ ನಾನು ಬರೆದುದೆಲ್ಲಾ ಭಸ್ಮವಾದೀತು.

೨) ಇನ್ನೊಂದು ಸಂದರ್ಭ. ಹೃದಯವಿದ್ರಾವಕವಾದದು:—ಕಡ್ಡಿ ಕಮಂಗಿ ಹಾಗಿರುವ ಹೀರೋವನ್ನು ಮೀಸೆಧಾಂಡಿಗ ಖಳನಾಯಕ ಜೈಲಿಗೆ ಕಳಿಸಿದ್ದಾನೆ. ಆ ಸುದ್ದಿಯನ್ನು ಕೇಳಿ ನಮ್ಮ ರಜತಪರದೆಯ ರಾಣಿಯು ತನಗುಂಟಾದ ಸಂತೋಷಾಧಿಕ್ಯದಿಂದಲೋ ಏನೋ, ಬಾಗಿಲಿನಿಂದ ಒಳಕ್ಕೆ ತಿರುಗಿ ತನ್ನ ಭವ್ಯಭವನದ ನಡುವೆ, ಟ್ಯೂಬ್‌ಲೈಟ್ ಕೆಳಗಿರುವ ಸುಪ್ಪತ್ತಿಗೆಯವರೆಗೆ (ಅವಳ ತಂದೆ ಮಿಲ್ ಕಾರ್ಮಿಕ. ಶ್ರಮಜೀವಿ) ನಡೆದುಕೊಂಡುಹೋಗಿ ಅದರಮೇಲೆ ಬೀಳುತ್ತಾಳೆ. ಆಗ ಇದ್ದಕ್ಕಿದ್ದಂತೆ ಅತಳ ವಿತಳ, ತಳಾತಳ, ಮಹೋಲೋಕ, ವೈಕುಂಠಗಳಲ್ಲಿರುವ ಎಲ್ಲಾ ಹಾರ್ಮೋನಿಯಂ, ಬಾಂಜೋ, ಸ್ಯಾಕ್ಸೋ ಫೋನುಗಳು ಒದರಲಾರಂಭಿಸುತ್ತವೆ. ಆ ಸಂಗೀತದ ಕಣಿ 'ಹೋ!' ಎಂದು ಒದರಲಾರಂಭಿಸುತ್ತಾಳೆ. ನಾವು ಮುಗ್ಧರಾಗಿ 'ವಹವಾ' ಎಂದು ಮೂರುಕಾಸು ತೂರಿ ಸಿಳ್ಳೆ ಹಾಕುತ್ತೇವೆ. ಅವಳಿಗೆ ತಾಳ ಮರೆಯದಿರಲೆಂದು ನಾವೂ ತಾಳ ಹಾಕುತ್ತೇವೆ. ಅದೋ ಅಂತವಿಲ್ಲದನಂತ ಹಾಡು. ಅದು ಮುಗಿಯುವಷ್ಟರಲ್ಲಿ ಗಂಧರ್ವಲೋಕದ ರಾಗರಾಗಿಣಿಯರೆಲ್ಲರ ಕೈಕಾಲುಗಳೂ ನಡುಗುತ್ತಿರುತ್ತವೆ. 'ಶ್ರುತಗಾನಮಭಿರಾಮಮಾದೊಡಶ್ರುತ್ರಗಾನಮಭಿರಾಮತರಂ' ಎಂದು ಪ್ರಾಜ್ಞರ್ ಒರೆವರಲ್ತೆ. ಈ ಸಂಗೀತ ವಾಹಿನಿಗೆ ಸಿಕ್ಕು ನಾವು ಕತೆಯನ್ನೇ ಮರೆತಿರುತ್ತೇವೆ.

ಹೀರೋಗಳೇನು ಕಡಿಮೆಯಿಲ್ಲ. ನವ್ಯಕಾವ್ಯದ ಜಂಜಡ ಅವರಿಗೆಲ್ಲ. ಅವರು ಪದವಿಟ್ಟಳುಪದ ಅಗ್ಗಳಿಕೆಯುಳ್ಳವರು.

'ಹುಳಕಡಿದ ಹಾರ್ಮೋನು ಮೇಣ್ ಅಮೀಬಾ' ಎಂದು ಹೇಳುವ ಕಷ್ಟ ಅವರಿಗಿಲ್ಲ. ಅವರು ಭಕ್ತರು ದಾರ್ಶನಿಕರು.

'ಜೀವನ್ ಅಪನಾ ವಾಪಸ್ ಲೇಲೇ
ಜೀವನ ದೇನೇ ವಾಲೇ
ಓ ದುನಿಯಾನೇ ರಖ್ ವಾಲೆ.' ಎಂದು ಹಾಡುವರು. ಚನ್ನಾಗಿದೆ. ಉತ್ತಮ ಪ್ರಾಸ ಸಂಪತ್ತು.

ಬರೀ ಹೀರೋ ಹೀರೋಯಿನ್ನುಗಳೇ ಅಲ್ಲ ಭಾರತದ ಎಲ್ಲರೂ ಕವಿಗಳು, ಸಂಗೀತಜ್ಞರು. ಮುದುಕ-ತದುಕರು, ಚಿಳ್ಳೆ ಪಿಳ್ಳೆಗಳು, ಭಿಕ್ಷುಕರು-ಕಕ್ಷಿಗಾರರು, ಲಾಯರುಗಳು-ಮೇಯರುಗಳು ಒಂದೇ ಮಾತಿನಲ್ಲಿ ಹೇಳುವುದಾದರೆ ಎಲ್ಲರೂ ಯಾವಾಗಲೂ ಎಲ್ಲೆಲ್ಲಿಯೂ ಹಾಡುಹೇಳುತ್ತಾರೆ. ಕುರಿತೋದದೆಯುಂ . ಗೊತ್ತಿದೆಯಲ್ಲಾ. ರೈಲ್ವೆಜಂಕ್ಷನ್ ಮಿಲಿಟರಿಲಾರಿ, ಪಾನ್ ಮುಂಜಾನ್, ಕಾಮೆಟ್ ವಿಮಾನ, ಸೈಬೀರಿಯ ಎಲ್ಲಿದ್ದರೇನು, ಯಾರಾದರೇನು ಆಶುಸಂಗೀತ, ಆಶು ಆರ್ಕೆಸ್ಟ್ರಾ.

೩) ಇದು ಹೇಗಿದೆ? ವಸಂತಮಾಸ! ಕೋಗಿಲೆ ಕುಕಿಲುತ್ತಿದೆ! ರಾತ್ರಿ! ಬೆಳುದಿಂಗಳು! ಮಂದಮಾರುತ! ಹರಿವ ತೊರೆಯಮೇಲೆ ಹರಿಗೋಲು! ಅಲ್ಲಿದಾನೆ ನಮ್ಮ ಹೀರೋ! ತಲೆಗೂದಲು ಭಯಂಕರವಾಗಿ ಚೆದರಿವೆ!! ಪ್ಯಾಂಟಿನ ತುದಿ ನಾಲ್ಕಾರು ಬಾರಿ ಮಡಿಚಲ್ಪಟ್ಟಿದೆ. ಬುಷ್ಷೋ ಬರ್ಡ್ಸೋ, ಕೋಟೋ, ಷರ್ಟೋ, ಜಾಕೆಟೋ, ಅವನ ಎದೆಯಮೇಲೆ ನೇತಾಡುತ್ತಿದೆ. ಆವನಿಗೆ ಮೀಸೆ ಬೇರೆ (ದಂಡ.)!! ಅವನಿಗೆ ಕಾವ್ಯ ಜ್ವರ 'ಓ ಒಒ ಓ' ಎಂದು ಅರಚುತ್ತಾನೆ. ಅತ್ತ ತೀರಾಂತರ ಕುಂಜವನದಿಂದಲೂ ಅದೇಕೂಗು? ಬೆಳುದಿಂಗಳ ರಾತ್ರಿಯಲ್ಲಿ ಹಾಗೆ ಕೂಗುವುದೇನಿದ್ದೀತು? ಗಾರ್ಧಬವೇ? ಘೋಸ್ಟೇ? ಅಲ್ಲ. ಬಂದಳು....ಬಂದಳು! .. ಗಭೀರ ನಿಶೆಯಲ್ಲಿ; ನಮ್ಮ ಹೀರೋಯಿನ್; (ಕಾರ್ಮಿಕನ ಮಗಳು) ಜಾರ್ಜೆಟ್ ಸೀರೆಯುಟ್ಟು, ರೇಷ್ಮೆ ರವಕೆ ತೊಟ್ಟು. ಮಂದಹಾಸದಿಂದ ಹೆಬ್ಬಿಗುಬ್ಬಾಲೆ ಬೆಕ್ಕನ್ನು ತಿರಸ್ಕರಿಸುತ್ತಾ. ಅವಳ ಹಿಂದೆಯೇ ಹಾರ್ಮೋನಿಯಂ ಇತ್ಯಾದಿ. ಮೂರ್ಛೆ ಹೋಗುವುದೊಂದುಬಾಕಿ.

೪) ಇನ್ನೊಂದು ಮೊಖದ್ದಮೆಯನ್ನು ಪರಿಶೀಲಿಸಿರಿ. (Consider this case) ಖಳನಾಯಕನ ಪ್ರಭಾವದಿಂದ ನಾಯಕ ಪಾತಾಳವನ್ನು ಸೇರಿದ್ದಾನೆ. (ಅವನು ನಿಜವಾಗಿಯೂ ಕೆಲಸವಿಲ್ಲದ ಕಮ್ಯುನಿಸ್ಟ್‌ಕವಿ) ಅವನತಾಯಿ ಹೋಟೆಲಿಗೆ ಸೇರಿ ಕೆಲಸಮಾಡುತ್ತಿದ್ದಾಳೆ. ನಾಯಕಿಯೋ ಮಗಳು of idle rich man. ಅವರೆಲ್ಲರೂ ದುಃಖಾತಿರೇಕದಿಂದ ಕಂಗೆಟ್ಟಿದ್ದಾರೆ.

ನಾಯಕಿಗೆ ಸ್ಫೂರ್ತಿ ಬಂದು ಹಾಡಲಾರಂಭಿಸುತ್ತಾಳೆ. ಆಗಿನ್ನೂ ಚನ್ನಾಗಿ ತಿಂದು ಬಂದಿದ್ದರೂ ಧ್ವನಿನಡುಗುತ್ತಿರುತ್ತದೆ. ಅವಳ ಪಲ್ಲವಿ ಮುಗಿದೊಡನೆ ನಾಯಕನ ಮಾತೆ ಸರ್ವಜ್ಞಳು, ಆ ಪಲ್ಲವಿಗೆ ತಕ್ಕ ಅನುಪಲ್ಲವಿಯನ್ನು ಕಟ್ಟಿ ದೋಸೆಹಿಟ್ಟು ರುಬ್ಬುವುದು ಬಿಟ್ಟು ಗಾಯನವಂ ಪಾಡುತ್ತಾಳೆ. ನೆನೆಸಿದವರ ಮನಸಿನೊಳಗಿರುವ ಆರ್ಕೆಸ್ಟ್ರಾ ಅಲ್ಲಿ ಹಾಜರ್. ಹೋಟಲು ಮಾಲೀಕ, ತ್ಯಾಗರಾಜಭಕ್ತ, ಆರ್ಕೆಸ್ಟ್ರಾದವರಿಗೆ ಮೆಚ್ಚಿ ಅವರ ಸಂಗೀತ ಕೇಳುತ್ತಾ ಮೈಮರೆತು ನಿಲ್ಲುತ್ತಾನೆ.

ಅವಳ ಅನುಪಲ್ಲವಿ ಕೊನೆಗೊಂಡೊಡನೆ ಕಾಲುಸೆಕೆಂಡಿನಲ್ಲಿ ಆರ್ಕೆಸ್ಟ್ರಾ, ಜೈಲಿಗೆ ಷಿಫ್ಟಾಗುತ್ತದೆ. ನಾಯಕ ಚರಣ ಕಟ್ಟಿ ಹಾಡುತ್ತಾನೆ. ವಿದ್ಯುತ್ತಿಗಿಂತ

ಹೆಚ್ಚು ವೇಗದಿಂದ ಚಲಿಸುವ ಈ ಆರ್ಕೆಸ್ಟ್ರಿಗರು ಮನಸುಮಾಡಿದರೆ ಮೂರುದಿನದಲ್ಲೇ ಚಂದ್ರಲೋಕಕ್ಕೆ ಹಾರಿಹೋಗಬಹುದು. ಹಾಗಾಗುವುದು ಲೋಕಕ್ಕೆ ಕ್ಷೇಮ.

ಇದನ್ನೆಲ್ಲಾ ನೋಡಿದರೆ ಸುಖ, ದುಃಖ, ಭಯ, ದ್ವೇಷ, ಅನುತಾಪ ಅಲ್ಲದೆ ಉಳಿದ ೨೮೭ ಸ್ಥಾಯೀ ಸಂಚಾರೀ ಭಾವಗಳಲ್ಲೂ ಮಾನವ, ಒಡಭಾರತೀಯ ಕಾವ್ಯ ಕಟ್ಟುವನೆಂಬುದು ಸ್ಪಷ್ಟವಾಗುತ್ತದೆ.

ಬೆಲೆಯಿಂದಕ್ಕುಮೆ ಕೃತಿ? ಇಲ್ಲ. ಗಾವಿಲಜನರ ಭಾಗ್ಯದಿಂದ ಮಕ್ಕು.

—ಅ. ರಾ. ಸೇ.



"ತೊಗೊಳ್ಳಿ ಸಾರ್, ಈಗ ಹೊಸದಾಗಿ 'ಹಿಪ್-ಪಾಕೆಟ್' ಕಾದಂಬರಿ ಬಂದಿದೆ,.... ೨೧೬ ಪುಟ, ಮೂರೂಮುಕ್ಕಾಲಾಣೆ !"

ಯಾತ್ರಿಕರ ಪತ್ರ

(೧೫)

ವಾಚಕಮಹಾಶಯ! ನಾವೆಲ್ಲಿದ್ದೆವು? ಹಾ-ಅದೇ-ನಮ್ಮ ವಾಹನಗಳ ಕಳೇಬರಗಳನ್ನು ಹುಡುಕುತ್ತ ಹೊರಟೆವು ಅಲ್ಲವೇ? ಆಮೇಲೆ ನಮ್ಮ ಲೀಡರ್-ಕೇಫ-ರಾಜನ್ನ ನನ್ನ ಹತೋಟಿಗೆ ಒಪ್ಪಿಸಿ ಮೂರುದಿನಗಳು ರಜಾಹೋದ. ಹೋಗುವಾಗ ನಮ್ಮ ಪ್ರಿಯವಾಚಕರಿಗೆ ಈ ಪತ್ರವಡೆ-ಅಲ್ಲ-ಪತ್ರವನ್ನು ಬರೆಯಲು ಹೇಳಿಹೋದ. ಹೋಗುವಾಗ ಹೇಳಿದ--

"ಲೋ ಚಂದಿ-ಪತ್ರಬರೆಯುವಾಗ ನಿನ್ನ ಹಾಳು ಪತ್ತೇದಾರಿ ಕಾದಂಬರಿ ಶೈಲಿ, ನಿನ್ನ ವೇದಾಂತ-ಇವನ್ನು ತುಸ ಮರೆತು ಬರಿ", ಅಂತ.

ನನಗೆ ಪತ್ತೇದಾರಿ ಕಾದಂಬರಿ ಅಂದರೆ ವಿಪರೀತ ಹುಚ್ಚು. ನನ್ನ ಸ್ನೇಹಿತರಲ್ಲಿ ನಾನೊಬ್ಬ 'ಪೂಟು ಪತ್ತೇದಾರ'ನೆಂದೇ ಹೆಸರುಗಳಿಸಿದ್ದೇನೆ. ಎಷ್ಟೋಬಾರಿ ರಾಜನಿಗೆ, ಅವನ ಹತ್ತಿರ ಚಿಂತಾಮಣಿ ದೇಶಮುಖ್ ಮುಷ್ಕರ ಹೂಡಿದಾಗ, ಅವನು ಹಿಂದೆ ಸೇದಿಬಿಸಾಡಿದ್ದ ಕಾಡಾನೆ ತುಂಡುಗಳನ್ನು ಹುಡುಕಿಕೊಟ್ಟಿದ್ದೇನೆ. ನನಗೇ ಸಾಮಾನ್ಯವಾಗಿರುವ ದರಿದ್ರ ಹೆಚ್ಚಿದಾಗ-ಅಂದರೆ ರಾಜನೋ ಕೇಫನೋ ನನ್ನ ಹತ್ತಿರ ಸಾಲಕ್ಕೆ ಬಂದಾಗ-ನನ್ನ ಪತ್ತೇದಾರಿ ದೃಷ್ಟಿಯನ್ನು ಮೇಲ್ಮಟ್ಟದಲ್ಲಿ ಉಪಯೋಗಿಸಿ, ನನ್ನಾಕೆ ಮೆಣಸಿನಪುಡಿಯಲ್ಲಿ ಹಣವನ್ನು ಹೂತಿಟ್ಟು ನದರೀ ಮೆಣಸಿನ ಪುಡಿ ಡಬ್ಬವನ್ನು ಉಪ್ಪಿನಕಾಯಿ ಜಾಡಿಯ ಅಡೀಲಿ ಬಚ್ಚಿಟ್ಟಿದುದನ್ನು ಹುಡುಕಿ ತೆಗೆದಿದ್ದೇನೆ. ಸಿಕ್ಕಿದ್ದರಲ್ಲಿ ನಾನರ್ಧ ಅವರರ್ಧ ಹಂಚಿಕೊಂಡಿದ್ದೇವೆ. ಮತ್ತೊಂದು ಬಾರಿ ಸಾಲದಂಗಡಿ ಶೆಟ್ರು ನನ್ನನ್ನು ಹುಡುಕಿಕೊಂಡು ಹೊರಟಾಗ ನನ್ನ ಸೂಕ್ಷ್ಮ ದೃಷ್ಟಿಯಿಂದ ಅವರು ಬರುವ ದಾರಿಯನ್ನು ಊಹಿಸಿ, ಬೇರೆ ದಾರಿಯಲ್ಲಿ ಅವರ ಅಂಗಡಿಗೇ ಹೋಗಿ ರಾಜನಿಗೆ ಒಂದು ಪ್ಯಾಕು 'ಕಾಡಾನೆ' ಕೊಡಿಸಿದ್ದೇನೆ-ಸಾಲವಾಗಿ. ಇನ್ನೂ ಬೇಕೆ?—ಬೇಡ. ಈ ಯಾತ್ರೆ ಮುಗಿದಮೇಲೆ ನಾನೇ ಆರಾಮವಾಗಿ ಕೂತು ಒಂದು ಪತ್ತೇದಾರಿ ಕಾದಂಬರಿ ಬರೆಯುತ್ತೇನೆ. ಎಚ್ಚರಿಕೆ!

ನಮ್ಮ ವಾಹನಗಳನ್ನು ಪುನಹ ಉಪಯೋಗಿಸಲು ಮೂರುದಿನಗಳ ರಿಪೇರಿ ಹಿಡಿಯುತ್ತೆ ಅಂತ ತಿಳಿದಮೇಲೆ ನಮ್ಮ ಲೀಡರ್ ಕೇಫ, ನನ್ನ ರಾಜನ್ನ ಅಲ್ಲಿಯೇ ಬಿಟ್ಟು ತಾನು ಮೂರುದಿನಗಳ ದೇಶಾಂತರ ಹೊರಟ. ಅವನನ್ನು ಬೀಳ್ಕೊಟ್ಟು

ನಾವು, ಮೊದಲು ನಮಗೆ ನಿಲ್ಲುಕ್ಕೆ ಒಂದು ಸ್ಥಳ ಹುಡುಕುತ್ತ ಹೊರಟೆವು. ನಾವಿದ್ದ ಊರು ನಿಮಗೆ ಜ್ಞಾಪಕವಿರಬಹುದು—ಜೀಕನಹಳ್ಳಿ. ಅಲ್ಲಿ ಒಂದು ಮುಸಾಫಿರ್‌ಖಾನೆ ಇದೆಯೆಂದು ಕೇಳಿ ಅಲ್ಲಿಗೆ ಹೊರಟೆವು, ಇದೆ. ಬಹಳ ಪುರಾತನಕಾಲದ್ದು, ನಮ್ಮ ಚರಿತ್ರೆಯ ಜ್ಞಾಪಕದ ಪ್ರಕಾರ ಚಂದ್ರಗುಪ್ತನ ಕಾಲದ್ದು. ಆದರೆ ಚಂದ್ರಗುಪ್ತನಿಗೇ ಅದು ಪುರಾತನಕಾಲದ್ದಿರಬಹುದು. ನನಗೀಗ ಅನ್ನಿಸುತ್ತೆ—ಒಂದು ವೇಳೆ ಪಾಂಡವರನ್ನು ಭಸ್ಮಮಾಡಬೇಕೆಂದು ಕೌರವ ಕಟ್ಟಿಸಿದ ಅರಗ್ಗಿನ ಮನೆಯಲ್ಲಿ ಉಳಿದ ಭಾಗವೇ ಈ ಮುಸಾಫಿರ್‌ಖಾನೆಯೋ ಅಂತ! ಅದನ್ನು ನೋಡಿದ ತಕ್ಷಣ ನನಗೆ ಮನಸ್ಸಿನಲ್ಲಿ ಒಂದು ತರಹ ಗುಟ್ಟಾದ ಸಂತೋಷವಾಯಿತು. ಮುಂದೆ ನಾನು ಬರೆಯುವ ಪತ್ತೇದಾರಿ ಕಾದಂಬರೀಲಿ ಇದೇ ಮುಸಾಫಿರ್‌ಖಾನೆಯಲ್ಲಿ ಎರಡು ಘೋರ ಖೂನಿಗಳನ್ನು ನಡೆಸುವುದಕ್ಕೆ ಅನುಕೂಲವೆಂದು. ತಕ್ಷಣ ಘಾಬರಿಯಾಯಿತು—ಒಂದುವೇಳೆ ಈಗಲೇ ನನ್ನ ರಾಜನ ಘೋರ ಕೊಲೆ ಅಲ್ಲೇ ಆದರೆ ಅಂತ! ನಾನು ಹೀಗೆ ಮನಸ್ಸಿನಲ್ಲಿ ತರ್ಕಮಾಡುತ್ತಿದ್ದಾಗ ಒಬ್ಬ ವ್ಯಕ್ತಿ ಒಂದು ಪುಸ್ತಕವನ್ನು ಹಿಡಿದು ಬಂದ. ಆತ ಆ ಮುಸಾಫಿರ್‌ಖಾನೆಯ ಕರ್ಮದರ್ಶಿ. ಬೇರೆ ಯಾವ ಜಾಗವೂ ಸಿಗುವಹಾಗಿಲ್ಲವೆಂದು ಅವನಿಂದಲೇ ತಿಳಿದಮೇಲೆ, ಒಂದು ತರಹ ನಮ್ಮ ಮೈಸೂರಿನ ರಾಜಕೀಯ ಧೈರ್ಯವನ್ನುತಾಳಿ ಅವನು ತಂದ ಪುಸ್ತಕದಲ್ಲಿ ನನ್ನ ರಾಜನ ಹೆಸರುಗಳನ್ನು ಗೀಚಿ, ಆತ ತೋರಿಸಿದ ಕೋಣೆಯನ್ನು ಸ್ವಾಧೀನಪಡಿಸಿಕೊಂಡೆ.

ಕೈಲಾಸಂ ಇದ್ದಿದ್ದರೆ ಚೆನ್ನಾಗಿತ್ತು. ಅವರಾಗಿದ್ದಿದ್ದರೆ ಆ ಕೋಣೆಯನ್ನು ವರ್ಣಿಸುತ್ತಿದ್ದರು. ನನ್ನ ಮಟ್ಟಿಗೆ ಆಕೋಣೆ—ಥೊಂಡೂರಾಯ ಕಪ್ಪಣ್ಣನಿಗೆ ಬಾಡಿಗೆಗೆ ಬಿಟ್ಟಿದ್ದ ಗೆದ್ದಲುಹಿಡಿದ ಹುತ್ತದ ಔಟ್ ಹೌಸಿನ ಸೂತಕದ ಕೋಣೆ—ಇದ್ದಹಾಗಿತ್ತು! ಒಳಗೆ ನುಗ್ಗಿದ ತಕ್ಷಣ ರಾಜ ಹುಚ್ಚಾಪಟ್ಟೆ ರೇಗುವುದಕ್ಕೆ ಶುರುಮಾಡಿದ. ಕೋಣೆಯ ಹವ ಅವನ ಶ್ವಾಸಕ್ಕೆ ನುಗ್ಗಿ ನೆತ್ತಿಗೆ ಹತ್ತಿರಬೇಕು! ರನವತ್ತಾಗಿ ಬೈದ. ಕನ್ನಡದಲ್ಲಿ-ಸ್ವಚ್ಛಕನ್ನಡ, ಅಖಿಲಕರ್ಣಾಟಕದ ಕನ್ನಡವಲ್ಲ--ಸ್ವಚ್ಛಕನ್ನಡದಲ್ಲಿ ಬೈದ! ನಾನು ಬೆರಗಾದೆ. ರಾಜ ಇಷ್ಟು ನಿರಾಯಾಸವಾಗಿ ವ್ಯಾಕರಣ ಸ್ವಚ್ಛವಾಗಿ ಬಯ್ಯಬಲ್ಲನೆಂದು ನನಗೇ ತಿಳಿದಿರಲಿಲ್ಲ. ಪ್ರಾಯಶಃ ರಾಜ ಈ ನಡುವೆ ನನಗೆ ತಿಳಿಯದಹಾಗೆ ಒಬ್ಬ ವೈದ್ಯನನ್ನೋ, ವೈದೀಕನನ್ನೋ, ಅಥವಾ ಬಹುಶಿಶುಪಿತನಾದ N. G. O. ನ್ನೋ ಸ್ನೇಹಮಾಡಿದ್ದಾನೆಂದು! ಇಲ್ಲದಿದ್ದರೆ ಯಾರಿಗೂ ಬಯ್ಯಾಟ ಗಗನಚುಕ್ಕಿ ಭರಚುಕ್ಕಿಗಳ ಮಟ್ಟಕ್ಕೆ ಬರುವುದಿಲ್ಲ. ಇದು ಸಹವಾಸದೋಷವೇ. ಆ ಮುಸಾಫಿರ್ ಖಾನೆಯ ಕರ್ಮದರ್ಶಿ ಅಲ್ಲೇ ಇದ್ದುದರಿಂದ ನಾನು ರಾಜನನ್ನು ಎಚ್ಚರಿಸಿದೆ ರಾಜ ತಕ್ಷಣ ಹಿಂದಿಯಲ್ಲಿ ಬಯ್ಯುಕ್ಕೆ ಶುರುಮಾಡಿದ. ಒಬರನ್ನು ಬಯ್ಯುಕ್ಕೆ ಹಿಂದಿ ಬಿಟ್ಟರೆ ಬೇರೆ ಭಾಷೆಯಿಲ್ಲ! ಲಾಯಖ್ಖಾದಭಾಷೆ-ನಾವೆಲ್ಲ ಹಿಂದೀ ಕಲಿಯುಕ್ಕೆ ಇದೊಂದು ಕಾರಣವೇಸಾಕು. ಎಷೋ ಜನ ನನಗೆ ಹೇಳಿ

ದ್ದಾರೆ-ಕೊಂಕಣಿಭಾಷೆ ಹಿಂದೀಗಿಂತ ದಿವ್ಯವಾಗಿದೆ, ಒಬ್ಬ--ಕೊಂಕಣಿಯಲ್ಲಿ ಬೈಸಿಕೊಂಡಮೇಲೆ ನೇಣುಹಾಕಿಕೊಳ್ಳುವುದಕ್ಕೂ ಹೇಸೊಲ್ಲ ಅಂತ ಆದರೂ ಕೊಂಕಣಿ ಭಾಷೆ ನಮ್ಮ ರಾಷ್ಟ್ರಭಾಷೆಯಾಗುವ ಭಯ ಸದ್ಯಕ್ಕೆ ದೂರವಾದ್ದರಿಂದ, ನಮ್ಮ ಮನಸ್ಸಿನ ಕಾವನ್ನು ಉಕ್ಕಿಸಿ ಶಮನಮಾಡೋಕೆ ಹಿಂದಿಯೇಸಾಕು. ಸಾಕೇನು--ಇರಲೇಬೇಕು. ಅದು ಹೇಗಾದರೂ ಹೋಗಲಿ--ರಾಜ ಸ್ವಲ್ಪ ಶಾಂತವಾದಮೇಲೆ, ಆ ಮುಸಾಫಿರ್ ಖಾನೆಯಲ್ಲಿ ನಮ್ಮನ್ನು ಬಿಟ್ಟು ಬೇರೆ ಮುಸಾಫಿರರಿದ್ದಾರೆಯೇ ಅಂತ ಕುತೂಹಲವಾಯಿತು. ವಿಚಾರಿಸಿದೆ.

ಕರ್ಮದರ್ಶಿ "ಎದುರುಗಡೆ ಎರಡು ಕೋಣೆಗಳನ್ನೂ ಇವತ್ತಿನಿಂದ ಐದುದಿನಗಳು ಯಾರೋ ಅಪರಕರ್ಮಶ್ರಾದ್ಧಗಳಿಗಾಗಿ ಬಿಡಿಸಿಕೊಂಡಿದ್ದಾರೆ" ಅಂತ ಹೇಳಿ ಅದೃಶ್ಯನಾದ.

ನಿಜವಾಗಿ ಅದೃಶ್ಯನಾದ. ಅವನು ಮೇಲೆ ಬರೆದಿರುವುದನ್ನು ಹೇಳಿದಾಗ ನನ್ನೆದುರಿಗೇ ಇದ್ದ. ನಾನದನ್ನು ಕೇಳಿ ಪುನಹ ಕಣ್ಣುಬಿಟ್ಟಾಗ ನನ್ನ ಪಕ್ಕದಲ್ಲಿ ರಾಜನೊಬ್ಬನೇ ಇದ್ದ.

ಸತ್ತವರಿಗೆ ಮಾಡುವ ಕರ್ಮವೆಂದರೆ ನನ್ನ ಮೈ "ಜುಂ" ಎನ್ನುತ್ತೆ! ಪ್ರಪಂಚದ ಎರಡನೇ ಮನುಷ್ಯ ಮೊದಲನೆಯವನಿಗೆ ಕರ್ಮಗಳನ್ನು ಮಾಡಿದ ಮೊದಲು, ಪ್ರಪಂಚದ ಕೊನೆಯಮನುಷ್ಯ ತನ್ನ--ಆತ್ಮ ಕರ್ಮವನ್ನು ಮಾಡಿಕೊಂಡು ಸಾಯುವ ತನಕ ಕೋಟ್ಯಾಂತರ ಕರ್ಮಗಳಾಗುತ್ತವೆ. ಆದರೂ, ಈಗಲೂ--ಅಂದರೆ ನ್ಯೂಟ್ರೋಜನ್ ಬಾಂಬು, ಹಾರಾಡುವ ತಟ್ಟೆ ಮತ್ತು ಕುಜದೇಶದ ಕನ್ಯೆಯರ ಕಾಲದಲ್ಲೂ— ಒಂದೇ ಒಂದು ವ್ಯವಹಾರದಿಂದ ಮನುಷ್ಯನ ಜಂಭ, ಆಡಂಬರ, ಆಸೆ, ಭರವಸೆ, ಜಿದ್ದುಗಳೆಲ್ಲಾ 'ಸೋಲಬೇಕಾದರೆ—ಅದು ಒಬ್ಬನ ಸಾವಿನಿಂದ ಅಥವಾ ಸತ್ತವನ ಶ್ರದ್ಧಕರ್ಮಗಳ ದೃಶ್ಯದಿಂದ! ಯುದ್ಧಮುಗಿದಮೇಲೆ ಹಿಟ್ಲರಿನ ಬೆಂಬಲಿಗರನ್ನೆಲ್ಲಾ ಗಲ್ಲಿಗೇರಿಸಿದರು—ಯುದ್ಧದಲ್ಲಿ ಉಳಿದವರು. ಆದರೂ ನನಗನ್ನಿಸುತ್ತೆ—ಶವಗಳು ಬಿದ್ದಮೇಲೆ ಅವರೇ—ಅಂದರೆ ಅಲ್ಲಿ ನೆರೆದಿದ್ದ ಹಿಟ್ಲರನ ಪ್ರತಿಶತ್ರುವೂ ಆ ಶವಗಳನ್ನು ನೋಡಿ ತಲೆತಗ್ಗಿಸಿ ತನ್ನ ಸೋಲನ್ನು ಒಪ್ಪಿಕೊಂಡಿರಬೇಕು—ಮನುಷ್ಯನಾಗಿದ್ದಿದ್ದರೆ.

ಒಂದೊಂದುಬಾರಿ ಸತ್ತವರಿಗೆ ಶ್ರಾದ್ಧಕರ್ಮಗಳೇತಕ್ಕೆ?—ಅನ್ನಿಸುತ್ತೆ. ವೈದೀಕರ ಜೀವನಕ್ಕಾಗಿಯೆ? ಕೆಲವೇಳೆ ಸತ್ತವರಿಗೆ ಸ್ವರ್ಗದಲ್ಲಿ ಒಂದು ಜಾಗವನ್ನು ವೈದೀಕರಿಂದ ಕೊಂಡಂತೆಯೇ ಇರುತ್ತೆ! ಆದರೆ ಅವರು ಕೊಡುವುದು ಸ್ವರ್ಗವೋ ನರಕವೋ ನಾವು ಹೋದಾಗಲೇ ತಿಳಿಯಬೇಕು. ಇದು ಮಟ್ಟಿಗೆ ನಿಜ—ನಮ್ಮ ಹಿರಿಯರಿಗೆ ಸ್ವರ್ಗದಲ್ಲಿ ಜಾಗಕೊಡಿಸುವುದಕ್ಕೆ ಮುಖ್ಯವಾಗಿ ನಮಗೆ ಅರ್ಹತೆ ಇರಬೇಕು. ದಕ್ಷಿಣೆ ದಾನಗಳನ್ನು ಯಥೇಚ್ಛವಾಗಿ ಕೊಟ್ಟಹಾಗೆಲ್ಲಾ ಸ್ವರ್ಗದ

ನಾಟಕ ಮಂದಿರದಲ್ಲಿ ಅವರಿಗೆ ರಂಗಸ್ಥಳದ ಹತ್ತಿರ ಹತ್ತಿರದಜಾಗ. ಅವು ಕಡಿಮೆ ಯಾವಹಾಗೆಲ್ಲಾ ಹಿಂದು ಹಿಂದಿನ ಜಾಗವೇ ಲಭ್ಯ! ಹಾಗಿದ್ದಮೇಲೆ ಮನುಷ್ಯನು, ತಾನೇ ಮಾಡಿದ ಪಾಪಪುಣ್ಯಗಳ ಫಲವೇನು? ಈ ಜೀವಾತ್ಮ.. ....?

"ಚಂದೀ! ನಿಂಗೇನೋಬಂತು ಕೇಡು? ಗೂಬೇಹಾಗೆ ನಿಂತಿದ್ದಿ? ನನ್ನ ಕರ್ಚಿಫೆಲ್ಲೋ?"

ರಾಜನ ಕೂಗು ಮೈಮರೆತಿದ್ದ ನನ್ನನ್ನು ಪುನಹ ಜೀಕನಹಳ್ಳಿ ಮುಸಾಫಿರ್ ಖಾನೆಯ ಕೋಣೆಯೊಳಗೆ ಇಳಿಸಿತು.

"ಹಾ?" ಅಂದೆ.

"ನನ್ನ ಕರ್ಚಿಫ್, ಕರವಸ್ತ್ರ, ರುಮಾಲ್?" ಅಂದ. ನನ್ನ ಸೂಕ್ಷ್ಮದೃಷ್ಟಿಯಿಂದ ನೋಡಿದೆ. ಅವನ ಕೋಟಿನಮೇಲೂ ಜೋಬಿನಿಂದ ಇಣಿಕಿ ನೋಡುತ್ತಿತ್ತು, ತೆಗೆದು ಅವನ ಕೈಲಿಕೊಟ್ಟೆ.

"Thanks" ಅಂದ.

ನಮ್ಮ ಯಾತ್ರೆ ಮುಗಿದಮೇಲೆ ಪತ್ತೇದಾರಿ ಕಾದಂಬರಿಗಳನ್ನು ಬರೆಯುತ್ತೇನೆ, ಪುರುಸೊತ್ತು ಸಿಕ್ಕರೆ ವೇದಾಂತವನ್ನೂ ಬರೆಯುತ್ತೇನೆ. ಆದರೆ ಈ ಯಾತ್ರೆ ಯಾವಾಗ ಮುಗಿಯುತ್ತೆ ಅಂತ ದೇವರೇಬಲ್ಲ, ಕೇಫನೇಬಲ್ಲ.

ವಿಶ್ವಾಸವಿರಲಿ.

ಇಂತಿ ನಿಮ್ಮ ಯಾತ್ರಿಕ.

ಚಂದಿ.

ಹಾದಿಯಲ್ಲಿ ಕೇಳಿಸಿದುದು.

ನೋಡಯ್ಯ, D. A ಲಿ ಐದುರೂಪಾಯಿ ಖೋತಾ ಆಯ್ತಲ್ಲಾ, ನನ್ನಾಕೆಗೆ ಹೇಳಿದರೆ ಅವಳು ಏನು ಹೇಳಿದಳು ಗೊತ್ತೇ—

"ನೋಡಿದಿರಾಂದ್ರೆ—ನಾನೊದಲೇ ಹೇಳ್ದೆ ಈ ಅನ್ಯಾಯವಾಗಿ ಡಿಯೇ ಬರೋದನ್ನ ನನ್ನ ಹತ್ತಿರಕೊಡೀಂತ. ನೀವು ಕೇಳಿದಿರಾ? ಅದನೆಲ್ಲಾ ಪೋಲು ಮಾಡಿಬಿಟ್ಟು ಈಗ ಪೆಚ್ಚು ಪೆಚ್ಚಾಗಿ ಐದುರೂಪಾಯಿ ಕಳ್ಕೊಂಡು ಕಣ್ಣು ಕಣ್ಣು ಬಿಟ್ಟರೆ ಏನು ಪ್ರಯೋಜನ?" ಅಂತ. ನನಗೇನು ಅರ್ಥವಾಗಿಲ್ಲ.

ನಮಗೂ ಅರ್ಥವಾಗಿಲ್ಲ!

ಕೇಫ.

ಇಸ್ಪೀಟು

ಛೆ! ಇದೆಂತಹ ಜೀವನ? ನೀರ ಮೇಲಣ ಬುದ್ಬುದ!
ಸಾಲ ಸೋಲು ಲಂಚ ಮೋಸ, ಅವನು ಇವನ ಬೈವ ದಿನವು! ಇವನ ಕಿತ್ತು ಅವನು ತಿಂಬ!

ಥೂ! ಇಸ್ಪೀಟಲ್ದೆ ಗತಿಯೇನು? ಇಂಥದ್ದೆಲ್ಲ ಮರೆಯಲು.
ಇಂದಿನ ಕೆಲಸ? ನಾಳೆ ಸಾಕು; ನಿನ್ನೆಯ ಕೆಲಸ? ಸೊನ್ನೆ ಅದಕೆ.
ಮುಂದಿನದೆಲ್ಲ ಎಂದೋ ಏನೋ....ಬಂದದೆಲ್ಲ ಬರಲಿ! ಹೋದದೆಲ್ಲ ಹೋಗಲಿ!
ದುಡಿದು ದುಡಿದು ದಣಿವು ಹೆಚ್ಚಿ, ಬೆಣ್ಣೆ ಹಚ್ಚಿ ಜಂಬಕೊಚ್ಚಿ,....
ಸಂಜೆ ದಿನವೂ ಆಕಳಿಕೆ....ಬಾಳೇ ಬಂಜೆ. ಬೇಜಾರು.
ಅವನು ಗೆದ್ದ....ಇವನು ಎದ್ದ....ಅವನ ಮಗನೇ ಸೀಟು ಪಡೆದ;
ಇವನು ಹಾರಿ ಚೀನ ಕಂಡ; ಅವನ ಅಳಿಯ ಅಮೇರಿಕಾ.
ಇಸ್ಪೀಟಲ್ದೆ ಗತಿಯೇನ್ರಿ? ನನಗು ನಿಮಗು ಇದನೇ ಮರೆಯಲು.
ಕುಂಟುತ ಸಾಗುವುದೆನ್ನಯ ಬಾಳು, ಮುನಿಸಿಪಲ್ ಶಾಲೆಯ ಕುರ್ಚಿಯ ಒಳಗಡೆ
ಅರವತ್ರಿಂದ ನೂರರವರೆಗೆ, ಐದೈದ್ರೂಪಾಯಿ ಬಡ್ತಿಯುಬಡೆದು.
ಮೈಮುರಿದೇಳಲು ಮನವೇ ಬಾರದು
ಕಾಫಿಯೆ ನನ್ನಯ ಷಾಂಪೇನ್ ವ್ಹಿಸ್ಕಿ!
ತಾರಾಗಣಗಳ ಸಹವಾಸ, ಸಿನಿಮಾ ಪರದೆಯ ನೆರಳಲ್ಲೇ.
ಬಸ್ಸಲಿ ತೊಟ್ಟಿ, ರೈಲಲಿ ಲೋಕಲ್, ನಾಟಕ ನೋಡಲು, ನೆಲವೇ ಆಸನ
ಕಾಲುಭಾಗದ ಜಟಕ, ಬಾಡಿಗೆಯ ಸೈಕಲ್,
ಲಾಲ್‌ಬಾಗ್ ಪೋಗೋ? ಕಾಸೇ ಇಲ್ಲ....
ಛೆ! ಇದೆಂತಹ ಜೀವನ?
ಪುಸ್ತಕ ಹಿಡಿದರೆ ಮಸ್ತಕ ನೋವು
ವಾಕಿಂಗ್ ಹೋಗಲು ತ್ರಾಣವೆ ಇಲ್ಲಿ; ರಸ್ತೆ ರಸ್ತೆಯಲು ಸಾಲದ ಕಾಟ.
ಇಸ್ಪೀಟಲ್ದೆ ಗತಿಏನ್ರಿ?
ನನ್ನಂಥವನಿಗೆ ಕಾಲವ ಕಳೆಯಲು.
ನಮ್ಮಂಥವರಿಗೆ ನಾಡಿಗೆ ಚೇತನ ನಾಲಗೆ ಚೇತನ
ಎರಡನೂ ಕೊಡುವುದು ಬ್ರಿಡ್ಜೊಂದೆ.

—ಪಾಟೀಲ.

ಪವಿತ್ರ—ಮಣ್ಣು!

ಹದಿನೈದನೆಯ ವಯಸ್ಸಿನಲ್ಲಿ ಮನೆಯಿಂದ ಹೇಳದೆ ಕೇಳದೆ ಹೊರಟುಹೋದ, ನರಸಿಂಹಮೂರ್ತಿ. ರಾಷ್ಟ್ರೀಯ ಚಳುವಳಿಯ ಕಾದಾಡುವ ಬಂಟನಾಗಿ ಗಾಂಧೀಜಿ ಆಶ್ರಮ, ಉಪ್ಪಿನ ಸತ್ಯಾಗ್ರಹ, ಕಾಂಗ್ರೆಸ್ ಅಧಿವೇಶನ — ಎಂದೆಲ್ಲಾ ಓಡಾಡಿದ. ರಾವಲ್ಪಿಂಡಿಯಿಂದ ರಾಮೇಶ್ವರದ ತನಕವೂ ಅಲೆದ. ಲಾಠಿ ರುಚಿ ನೋಡಿದ. ಜೈಲು ಕಂಡ–ಹಲವಾರು ಸಲ. ಅಪ್ಪ ಸತ್ತಾಗಲೂ ಮನೆಗೆ ಬರಲಿಲ್ಲ. ತಾನೆಲ್ಲಿದ್ದೇನೆಂದು ಮನೆಗೆ ತಿಳಿಸಲಿಲ್ಲ. ತಾಯಿಯನ್ನ ಒಂಟಿಯಾಗಿ ಹಲುಬುವುದಕ್ಕೆ ಬಿಟ್ಟ. ಅಂತೂ ಕೊನೆಗೊಮ್ಮೆ ದೇಶ ಸ್ವತಂತ್ರವಾದದ್ದನ್ನು ಕಂಡ. ಆನಂತರ ಆರುವರ್ಷ ಕಳೆದಮೇಲೆ ನಲವತ್ತು ಮೀರಿದ ನರಸಿಂಹಮೂರ್ತಿ ತಾನು ಹುಟ್ಟಿದ ಮನೆಯ ಮುಂದೆ ಪ್ರತ್ಯಕ್ಷನಾದ. ಆ ತನಕ ಬೆಳೆಸಿದ್ದ ಗಡ್ಡವನ್ನು ಬೋಳಿಸಿದ–ತಾಯಿಯ ಕೈಯಲ್ಲಿ ಎರಡಾಣೆ ಇಸಕೊಂಡು. ಮೂಲೆಯಲ್ಲಿದ್ದ ಮುರುಕು ಮಂಚದಮೇಲೆ ಕೆಮ್ಮುತ್ತ ಮಲಗಿದ–ತನ್ನಲ್ಲಿದ್ದ ಒಂದೇ ಒಂದು ಸನ್ಯಾಸಿ ಬಣ್ಣದ ಖದ್ದರ್ ಪಂಚೇನ ಹೊದ್ದುಕೊಂಡು.

ಹೆರವರ ಮನೆಯಲ್ಲಿ ಊಳಿಗಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದ ತಾಯಿಗೆ ಹೊಸ ಚಾಕರಿಯೊಂದು ಬಂತು. ಆದರೂ ಅವರಿಗೆ ಸಂತೋಷವೇ–ತನ್ನ ಕರುಳಿನ ತುಣುಕು ಮನೆಗೆ ಬಂತಲ್ಲಾ ಎಂದು! ಆಂಜನೇಯಸ್ವಾಮಿಗೆ ಕಾಯಿ ಒಡೆದು ಕರ್ಪೂರಾರತಿ ಮಾಡಿಸಿದರು. ಡಾಕ್ಟರರ ಹೆಂಡತಿಯ ಕೈಕಾಲು ಹಿಡಿದು, ಹೇಗೂ ಡಾಕ್ಟರು ಮನೆಗೆ ಬರುವಹಾಗೆ ಮಾಡಿದರು. ಪರೀಕ್ಷೆಮಾಡಿ ನೋಡಿ 'ಅರುವತ್ತನೆ ಸಂವತ್ಸರಾವಮ್ಮಾ' ಎಂದರು ಡಾಕ್ಟರು.

ದೇವರ ಗೂಡಿನ ಎರಡು ಡಬ್ಬಿಗಳಿಂದ ಬಿಲ್ಲೆಗಳೂ ತಲೆದಿಂಬಿನೊಳಗಿನ ಪುಟ್ಟ ಗಂಟಿನಿಂದ ಎಂಟಾಣೆ ರೂಪಾಯಿಗಳೂ ಹೊರಬಂದುವು. ಎಲ್ಲವೂ ಒಟ್ಟು ಸೇರಿದಾಗ ಮೂವತ್ತು ರೂಪಾಯಿ ಹತ್ತು ಆಣೆ ಆರುಕಾಸು. ಅಷ್ಟನ್ನು ತಂದು ಡಾಕ್ಟರಮುಂದೆ ಜೋಡಿಸಿಟ್ಟು 'ನನ್ನ ಮಗೂನ ಉಳಿಸಿಕೊಡಿ' ಎಂದು ಬೇಡಿದರು ತಾಯಿ. ಸಂಜೆ ಪಕ್ಕದಮನೆಗೆ ಹೋಗಿ ಅತ್ತು ಬಂದರು. ಯಾಕೆಂದರೆ ಮನೇಲಿ ಕಣ್ಣೀರು ಹಾಕಿದರೆ ಬಲು ರೇಗುತ್ತೆ ನರಸಿಂಹಮೂರ್ತಿಗೆ!

ಪಕ್ಕದಮನೆ ಸೀನಿಗೆ ಅದನ್ನ ಕಂಡು ಏನೇನೋ ಜ್ಞಾಪಕಕ್ಕೆ ಬಂತು. ರಾಜಕೀಯ ಸಂತ್ರಸ್ಥರು, ಹತ್ತಿಕರೆ, ಇಪ್ಪತ್ತಿಕರೆ, ಪರಿಹಾರ ನಿಧಿ-ಇತ್ಯಾದಿಗಳನ್ನೆಲ್ಲ ಜ್ಞಾಪಿಸಿಕೊಂಡ. ಕೈಲಾದ್ದು ಮಾಡೋಣ ಎಂದು ಕೂಡಲೆ ಹೊರಟ ದೇಶಪ್ರೇಮಿ ದೀನದಯಾಲ್‌ರವರಲ್ಲಿಗೆ. ದೀನದಯಾಲ್ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು. ಈಗ ರಚನಾತ್ಮಕ ಕಾರ್ಯದಲ್ಲಿ ತೊಡಗಿದಾರೆ. ಸೀನಿ ಅವರನ್ನು ಬಲ್ಲವನಾಗಿದ್ದ.

ಪ್ರಾಸ್ತವಿಕವಾಗಿ ಆಡಬೇಕಾದ್ದನ್ನು ಆಡಿ ನರಸಿಂಹಮೂರ್ತಿಯ ಪ್ರಸ್ತಾಪ ತೆಗೆದ ಸೀನಿ. ಅವನ ಪೂರ್ವೋತ್ತರಗಳನ್ನೆಲ್ಲ ವಿವರಿಸಿದ ಪರಿಸ್ಥಿತಿ ಈಗ ಹೀಗಿದೆ ಎಂದು ವರ್ಣಿಸಿದ. ನೀವೇನಾದರೂ ಮನಸ್ಸುಮಾಡಿದರೆ ದೇಶ ದೇಶ ಅಂತ ಅಲೀತಿದ್ದ ಒಂದು ಜೀವ ಉಳಿಯುತ್ತೆ ಅಂದ.

ದೀನದಯಾಲ್ ಅಪಾರವಾದ ಅನುತಾಪ ಸೂಚಿಸಿದರು. ಆದರೆ ಈಗ ತಾವೇನೂ ಮಾಡುವ ಹಾಗಿಲ್ಲವಲ್ಲ ಎಂದು ಪರಿತಪಿಸಿದರು. ಪರಿಹಾರಕೊಡುವ ಕಾರ್ಯಕ್ರಮವೆಲ್ಲ ಮುಗಿದುಹೋಗಿದೆ. ಈಗಿನ ಕಾರ್ಯಕ್ರಮಗಳೇ ಬೇರೆ. ಸದ್ಯ ಅಸ್ಪೃಶ್ಯತೆಯು ಸಂಪೂರ್ಣ ನಿವಾರಣೆಯಾಗಬೇಕಾಗಿದೆ, ಅದಕ್ಕಾಗಿ ಈ ನವೀನ ಕಾರ್ಯಕ್ರಮ ತೊಡಗಿದ್ದೇವೆ — ಎಂದು ದೀನದಯಾಲ್ ಷೆಲ್ಫಿನಲ್ಲಿಟ್ಟಿದ್ದ ಸಾಲು ಸಾಲು ಭರಣಿಗಳನ್ನು ತೋರಿಸಿದರು.

"ಅದೇನದು?"—ಎಂದು ಬೆರಗಾಗಿ ಕೇಳಿದ ಸೀನಿ.

"ಅದೇ?....ಹೇಳ್ತೀನಿ ಕೇಳಿ....ಅಸ್ಪೃಶ್ಯರಿಗೆ ಪ್ರವೇಶವಿಲ್ಲದ ದೇವಾಲಯಗಳು ಭಾರತದಲ್ಲಿ ಎಲ್ಲೆಲ್ಲಿ ಇವೆಯೋ ಅವುಗಳ ನೆಲದಿಂದ ಮಣ್ಣು ಅಗಿಸಿ ತರಿಸಿ ಹೀಗೆ ಪ್ರತ್ಯೇಕ ಪ್ರತ್ಯೇಕ ಭರಣಿಗಳಲ್ಲಿ ತುಂಬಿಸಿಟ್ಟಿದ್ದೇವೆ. ಅಸ್ಪೃಶ್ಯರಿಂದ ಈ ಭರಣಿಗಳನ್ನು ಮುಟ್ಟಿಸುವುದೇ ಈಗಿನ ಕಾರ್ಯಕ್ರಮ. ಮುಟ್ಟಿದವರ ಸಹಿಗಳನ್ನೆಲ್ಲ ತೆಗೆದುಕೊಳ್ಳಲಾಗುತ್ತಿದೆ. ಭಾರತದ ಎಲ್ಲಾ ಕಡೆಗಳಿಗೂ ಈ ಭರಣಿಗಳನ್ನು ಒಯ್ಯುವ ಏರ್ಪಾಡಾಗಿದೆ. ಈ ಮಹಾಕಾರ್ಯಕ್ಕೆ ನಿಮ್ಮೆಲ್ಲರ ಸಹಕಾರ ಬೇಕು".

"ಸರಿ ...ಆದರೆ ನಾನು ಹೇಳಿದ ಆಸಾಮಿ ವಿಚಾರ?" ಎಂದು ಸೀನಿ ತಲೆ ತುರಿಸಿದ.

"ನಾನಾಗಲೇ ಹೇಳಿದೀನಲ್ಲ"

"....ಏನಾದರೂ ಸಹಾಯ .. "

"ಸದ್ಯ ಅವರನ್ನಿಲ್ಲಿಗೆ ಕರಕೊಂಡುಬನ್ನಿ. ಈ ಭರಣಿಗಳನ್ನಾದರೂ ಮುಟ್ಟಿ ಹೋಗಲಿ...."

"ಅಯ್ಯೋ! ಆತನೆ ಮಣ್ಣಾಗುವ ಸ್ಥಿತಿಯಲ್ಲಿದಾನಲ್ಲ ಸ್ವಾಮಿ! ಆತನಿಗೇಕೆ ಈ ಪವಿತ್ರ ಮೃತ್ತಿಕಾ ಸಂಸ್ಪರ್ಶ!

"ಚಿಂತೆಯಿಲ್ಲ.... ಭರಣಿಗಳನ್ನು ನೀವೇ ಮುಟ್ಟಿಸಿ ತರುವ ಏರ್ಪಾಟು ಮಾಡಬಹುದೊ?"

"ಆದರೆ ಸ್ವಾಮಿ....ಈ ಚಳುವಳಿ ಅಸ್ಪೃಶ್ಯರಿಗಾಗಿ ಮಾತ್ರ ಎಂದಿರಲ್ಲ.... ಈ ಆಸಾಮಿ ಆ ವರ್ಗಕ್ಕೆ ಸೇರಿದವನಲ್ಲ"

"ಹಾಗೋ! ಹೋಗಲಿ ಬಿಡಿ....ಅಗೋ! ಪವಿತ್ರ ಮೃತ್ತಿಕಾ ಸಂಸ್ಪರ್ಶಕ್ಕಾಗಿ ಮಹಾಜನಗಳು ಬರುತ್ತಿದಾರೆ. ಆ ಕಡೆ ಗಮನಕೊಡಬೇಕು ...ನಮಸ್ಕಾರ"

ಸೀನಿ ಹೊರಗೆ ಬಂದ. ಈ ಮಣ್ಣು—ಈ ನೆಲ ಪವಿತ್ರವಾಯಿತು ಎಂದು ಗೊಣಗಿದ.

—ರಾಮಕೃಷ್ಣ.

ಹೋಳು

ಸರಸ್ವತಿಯ ಗಂಡ ಆ ಬ್ರಹ್ಮನಿಗೆ
ಹಿಂದೆ ಮುಂದೆ ಆಚೆ ಈಚೆ, ಒಟ್ಟು ಮುಖ ನಾಕು!
ರಾವಣಗೆ ಎಂಟು ದೆಸೆಗೂ ಎಂಟು, ದೆಸೆಗೆಟ್ಟವು ಎರಡು,....ಸಾಕು!
ನನಗೋ?
ಪಕ್ಕ ಪಕ್ಕ, ಪಕ್ಕಾ ಎರಡು!
ದ್ವಂದ್ವ ಜೀವ ಎನ್ನದು.
ನುಡಿಯಲೊಂದು, ನಡೆಯಲೊಂದು, ಪಡೆಯಲೊಂದು, ಕಳೆಯಲೊಂದು,
ಒಂದು ದೇವ ಒಂದು ದೆವ್ವ
ಸವ್ಯಸಾಚಿ ಈ ಪಿಶಾಚಿ
ಒಂದು ನೀತಿ ಒಂದನೀತಿ, ಒಂದು ಏತಿ ಒಂದು ಪ್ರೀತಿ
ಒಂದು ಈತಿ ಒಂದು ರೀತಿ, ಒಂದು ಬಿಸಿಲು ಒಂದು ತಣಿಲು
ಒಂದು ನಾಕ ಒಂದು ನರಕ ಮಾರಕ, ಸ್ಮಾರಕ
ಒಂದು ಬೇಕು ಒಂದು ಬೇಡ, ಒಂದು ಬುದ್ಧ ಒಂದು ಕ್ರುದ್ಧ
ಒಂದೆ ಹಡಗಿಗೆರಡು ಕ್ಯಾಪ್ಟನ್ ಒಂದೆ ಸೈನ್ಯಕ್ಕೆರಡು ಜನರ
ಲೊಂದೆ ರೋಗಿಗೆರಡು ವೈದ್ಯ ನೊಬ್ಬನರನಿಗೆರಡು ಶಿರ!
ಹೋಳು ಬಾಳು ನನ್ನದು
ಹಾಳು ಬಾಳು ನನ್ನದು

—ಕಾಮತ್

"ವಿವಾಹ ವಿಚ್ಛೇದನ"

"ಏನ್ರೀ ಅಡಿಗೆ?"

ರುಮಾಲು ತೆಗೆದಿಟ್ಟು ಅಂಗಿ ಬಿಚ್ಚುತ್ತಾ ಶಾಮಣ್ಣ ಬಾಗಿಲಲ್ಲಿ ಬಳುಕುತ್ತಿದ್ದ ಅರ್ಧಾಂಗಿಯನ್ನು ಮರ್ಯಾದೆಯಿಂದ ಕೇಳಿದ, ಸಂಜೆ ಎಂಟು ಗಂಟೆ ಹೊತ್ತಿನಲ್ಲಿ.

"ಹುರುಳಿ ಹಪ್ಪಳ, ಸಣ್ಣ ಈರುಳ್ಳಿ ಹುಳಿ, ಹುರುಳಿಕಾಯಿ ಪಲ್ಯ" ಎಂದು ಕೋಕಿಲವಾಣಿಯು ಉತ್ತರಿಸಿದಳು.

ಶಾಮಣ್ಣನಿಗೆ ಹಸಿವಾಗಿತ್ತು. ಆಫೀಸಿನಲ್ಲಿ ಸಂಜೆ ಹೊತ್ತಿಗೆ ಮೂರು ತಿಂಡಿ ಕೊಡಿಸಲು ಯಾವನೊಬ್ಬ ಅರ್ಜಿದಾರನೂ ಬಂದಿದ್ದಿಲ್ಲ. ಹಸಿವಾದಾಗ ಅವನಿಗೆ ಬಲು ಪ್ರಿಯವಾದ ಈರುಳ್ಳಿ ಹುಳಿ, ಅದನ್ನು ಇನ್ನೂ ರುಚಿಮಾಡುವ ಹುರುಳಿ ಹಪ್ಪಳ, ಮಜ್ಜಿಗೆ ಅನ್ನಕ್ಕೆ ಹುರುಳಿಕಾಯಿ ಪಲ್ಯ ನೆಂಚಿಕೊಂಡರೆ ಎಷ್ಟು ಸೊಗಸು, ಇವೆಲ್ಲಾ ಅಂದೇ ದೊರಕಬೇಕೇ! ಒಂದೇ ಸಂಜೆಯಲ್ಲಿ ಸಿಗುವ ಪುಣ್ಯವೇ?

ಖುಷಿ ಖುಷಿಯಾಗಿ ಬೇಗ ಕೈಕಾಲು ತೊಳೆದುಕೊಂಡು ಸಂಧ್ಯಾವಂದನೆ ಶಾಸ್ತ್ರ ಮುಗಿಸಿ ತಟ್ಟೆ ಹಾಕಿಕೊಂಡು ಊಟಕ್ಕೆ ಕುಳಿತ. ಕುಳಿತಾಗಲೇ ಊಟದ ಮನೆ ಯೆಲ್ಲಾ ಈರುಳ್ಳಿಯಿಂದ ಘಮಘಮಿಸಿತು.

ಸೌಟು ತಪ್ಪಲೆಯನ್ನು ತಟ್ಟಿದ ಘಂಟಾನಿನಾದ, ಬಳೆಗಳು ಸೋಂಕಿ ಸರಿದ ಕಿಣಿಕಿಣಿ ಸಪ್ಪಳ, ದೊಡ್ಡ ಪಾತ್ರೆಯಿಂದ ಸಣ್ಣಪಾತ್ರೆಗೆ ಸುರಿದ ಗಳಗಳ ರವ. ಈ ಮಧುರಗೀತವು ಅಡಿಗೆಮನೆಯಿಂದ ಶಾಮಣ್ಣನ ಕಿವಿಗಳಿಗೆ ಕೇಳಿಸಿ, ಅವ ಒಂದು ರೀತಿಯಾಗಿ ಊಹಾಲೋಕದಲ್ಲೇ ಪರವಶನಾಗಿದ್ದ.

ತಟ್ಟೆಯಲ್ಲಿ ಪಲ್ಯ ಬಡಿಸಲ್ಪಟ್ಟಿತು. ಇದನ್ನು ಈಗಲೇ ರುಚಿ ನೋಡಬಾರದು. ಇವನ್ನು ಮಜ್ಜಿಗೆ ಅನ್ನಕ್ಕೇ ಮೀಸಲಾಗಿರಿಸಬೇಕು ಎಂದು ಶಾಮಣ್ಣ ಒಂದು ಹುರುಳಿ ಕಾಯಿ ಚೂರನ್ನೂ ಬಾಯಿಗಿಡಲಿಲ್ಲ. ನೋಡಿಯೇ ಆನಂದಪಟ್ಟ, ಮುದುಕ ತನ್ನ ಮೂರನೆ ಹೆಂಡತಿಯ ಶೃಂಗಾರವನ್ನು ಕಂಡು ಆನಂದ ಪಡುವಂತೆ,

ಅನ್ನ ತಂದು ಬಡಿಸಿದಾಗ "ಸ್ವಲ್ಪ ಮಿಡ್ಡೆಯಾಯ್ತು ಅಂದರೆ" ಎಂದು ಮುನ್ನೆಚ್ಚರಿಕೆಯೂ ಕೊಡಲ್ಪಟ್ಟಿತು.

ಅನಂತರ ತುಪ್ಪ ತಂದು ಬಡಿಸಿದಾಗ ಅದರ ಘಮಘಮ ಶಾಮಣ್ಣನಿಗೆ ತಟ್ಟಲೇ ಇಲ್ಲ. ಬಹುಶಃ ಈರುಳ್ಳಿ ವಾಸನೆಯಿಂದ ಹೀಗಾಗಿರಬಹುದು ಎಂದುಕೊಂಡ ಆಶಾವಾದಿ ಶಾಮಣ್ಣ. ಈರುಳ್ಳಿ ಹುಳಿ ತಂದು ಬಡಿಸಿದ್ದಾಯಿತು. ಹುರುಳಿ ಹಪ್ಪಳವನ್ನೂ ತಂದು ಬಡಿಸಿದ್ದಾಯಿತು

ಆ ಹುರುಳಿ ಹಪ್ಪಳ ನೋಡಿದಾಗಲೇ ಶಾಮಣ್ಣನ ಹೊಟ್ಟೆಯಲ್ಲಿ ಧೂಮಕೇತು ಹೊಕ್ಕಂತಾಯ್ತು. "ಏನೇ ಇದು! ಹುರುಳಿ ಹಪ್ಪಳವೋ? ಅಥವಾ ಇಜ್ಜಲಿನ ಹಪ್ಪಳವೋ!" ಎಂದು ನುಡಿದ.

"ಸ್ವಲ್ಪ ಹೆಚ್ಚಾಗಿ ಸುಟ್ಟಿದ್ದಕ್ಕೇ ಇಷ್ಟು ರೇಗೋದೇ" ಎಂದು ಕೋಕಿಲವಾಣಿ ಬಿರು ವಾರ್ ನುಡಿದಳು.

ಶಾಮಣ್ಣ ತಣ್ಣಗಾದ.

ಅನ್ನ ಈರುಳ್ಳಿಹುಳಿ ಕಲಸಿಕೊಂಡ. ಒಂದೊಂದು ಈರುಳ್ಳಿಯನ್ನೂ ಮೃದುವಾಗಿ ಮುಟ್ಟಿ ಅದು ಒಡೆಯದಂತೆಯೇ ಕಲಸಿ, ಒಂದು ತುತ್ತು ಬಾಯಿಗಿಟ್ಟುಕೊಂಡ. ಅದನ್ನು ಅಗಿಯಲೇ ಇಲ್ಲ.

ಉಪ್ಪಿತ್ತು, ಖಾರವಿತ್ತು, ಈರುಳ್ಳಿ ಇತ್ತು, ಬೇಳೆ ಇತ್ತು, ಹುಳಿಯೂ ಇತ್ತು, ಒಗ್ಗರಣೆಯೂ ಇತ್ತು. ಆದರೆ ತಿಂದಾಗ ಎಲ್ಲವೂ ಬೇರೆ ಬೇರೆಯಾಗಿಯೇ ಇದ್ದಂತೆ ರುಚಿ. ಎಲ! ಎಲಾ! ಹಾಕೋ ಪದಾರ್ಥ ಎಲ್ಲಾನೂ ಹಾಕಿದ್ದರೂ, ಬೇಯಿಸೋವಾಗ ಏನೋ ಆಗಿರಬೇಕು! ಅದಕ್ಕೇ ಈ ಹುಳಿಯಲ್ಲಿ ಪದಾರ್ಥಗಳ ಮದುವೆಯಾಗಲೇ ಇಲ್ಲ. ಆಗಿದ್ದರೂ ಈಗ ವಿಚ್ಛೇದನ ಆಗಿಯೇ ಹೋಗಿದೆ, ಎಂದಂದುಕೊಂಡ ಶಾಮಣ್ಣ.

"ಇದರ ರುಚಿ ನೋಡಿದ್ದೀಯೇನೇ!" ಎಂದು ಗುಟರಿಸಿದ ಶಾಮಣ್ಣ, ಅಡಿಗೆ ಮನೆ ಬಾಗಿಲ ಕಡೆಗೆ ನೋಡುತ್ತಾ.

ಅಡಿಗೆಮನೆ ಬಾಗಿಲಿಂದ ಪ್ರತ್ಯುತ್ತರ ಬಂತು "ರುಚಿ ನೋಡಲಿಲ್ಲ, ನಿಮಗಿಂತ ಮುಂಚೆ ನಾನು ತಿನ್ನಬಹುದೇ ಅಂದರೆ! ಪಕ್ಕದಮನೆ ಸಾತಕ್ಕ ಸಂಜೇಲಿ ಬಂದಿದ್ದರು. ಅಡಿಗೆಮಾಡುತ್ತಿದ್ದಾಗ ಇಲ್ಲೇ ಕುಳಿತಿದ್ದರು. ವಾಸನೆ ನೋಡಿಯೇ ಹುಳಿ ಬಲು ಚೆನ್ನಾಗುತ್ತೆ ಎಂದು ಅಂದರು"

ಪಕ್ಕದಮನೆ ಸಾತಕ್ಕನ ಮೂಗಿಗೆ ಪೀನಾಸಿ ಹಿಡಿದಿದೆ. ನಿನ್ನ ಪತಿಭಕ್ತಿಗೆ ನನ್ನ ಊಟ ಬಲಿ. ನೀನು ರುಚಿ ನೋಡಿ ಅಡಿಗೆಮಾಡಿದರೆ ಹೊಟ್ಟೆಯಾರೂ ತುಂಬುತ್ತೆ. ಈಗ ನಾನು ರುಚಿ ನೋಡಿ ಬೇಡ ಎಂದರೆ ನೀನು ಸುಖವಾಗಿ ಆಮೇಲೆ ಅರಳು ಉಪ್ಪಿನಕಾಯಿ ತುಪ್ಪ ಕಲಸಿಕೊಂಡು ಗಡತ್ತಾಗಿ ರುಚಿಯಾಗಿ ಹೊಡೆದು

ಬಿಡುತ್ತೀ ಅಲ್ಲವೇ?" ಎಂದು ಶಾಮಣ್ಣ ಪ್ರತ್ಯಕ್ಷವಾಗಿ ಕೋಪವಾಗಿ ಹೇಳಿಯೇ ಬಿಟ್ಟ.

"ರುಚಿಯಾಗಿರದಿದ್ದರೆ ಚೆಲ್ಲಿಬಿಡಿ, ಅನ್ನ ಮಜ್ಜಿಗೆ ಪಲ್ಯ ಇದೆಯಲ್ಲಾ" ಎಂದು ಅಳುದನಿಯಲ್ಲಿ ಹೇಳಿದಾಕೆ, ಇವ ನೋಡುತ್ತಿದ್ದ ಹಾಗೆಯೇ ತಟ್ಟೆ ಸಾಗಿಸಿ, ತೊಳೆದು ತಂದು ತಿರುಗಿ ಹಾಕಿ ಅನ್ನ ಬಡಿಸಿ, ಮಜ್ಜಿಗೆ ಬಡಿಸಿ, ಪಲ್ಯವನ್ನೂ ಬಡಿಸಿದಳು.

ಶಾಮಣ್ಣ ಕಲೆಸಿದ. ಒಂದು ತುತ್ತು ಬಾಯಿಗಿಟ್ಟ. ಇಂಗು ತಿಂದ ಕಪಿ ಎಂದು ಗಾದೆ ಕೇಳಿರಬಹುದು ನೀವು. ಆದರೆ ಇಂಗು ಹೆಚ್ಚಾದ ಈ ಮಜ್ಜಿಗೆ ಅನ್ನ ತಿಂದ ಶಾಮಣ್ಣನನ್ನು ನೋಡಿದ್ದಿದ್ದರೆ ಆ ಗಾದೆ ಸಪ್ಪೆ ಎಂದೇ ಅನ್ನುತಿದ್ದಿರಿ. ಶಾಮಣ್ಣನ ಮುಖ ಕೆಂಪೇರಿದ್ದು ನೋಡಿದರೆ ಅವ ಹಾರಿ ಮೇಲಿರುವ ಬಟ್ಟೆ ಹರಹುವ ಕೋಲನ್ನೇ ಹಿಡಿದುಕೊಂಡು ಜೋಲಾಡುತ್ತಾನೋ ಎಂದು ಅನುಮಾನ ಬರುವಂತಿತ್ತು.

ಹುರುಳಿಕಾಯಿಪಲ್ಯ ಹೇಗೆಮಾಡಿದರೂ ರುಚಿ. ಆದನ್ನು ಅಡಿಗೆಮಾಡಿ ಕೆಡಿಸಬೇಕಾದರೆ, ಭೀಮನ ಶತ್ರು ಕೀಚಕನೇ ಅಡಿಗೆಮಾಡಬೇಕು. ಇದಾದರೂ ಹೊಟ್ಟೆ ತುಂಬಿಸುತ್ತೀನೋ ಎಂದು, ಶಾಮಣ್ಣ ಅದನ್ನು ಎರಡು ಬೆರಳ ಹಿಡಿಯಷ್ಟು ಬಾಯಿಗಿಟ್ಟುಕೊಂಡ. ಅಗಿದ. ಅಗಿದ. ಅಗಿದ. ಅಗಿದ. ಏನೋ! ಸರ್ವೆ ಸೌದೇನೇ ಅಗಿದ ರುಚಿ. ಅರತಕ್ಷತೆಯಲ್ಲಿ ಕೊಟ್ಟ ಎಲೆಅಡಿಕೆಯನ್ನು ಅಗಿದ ಹಾಗೇ ಆಯಿತು. ಮಾವ ಕೊಟ್ಟ ಮಾತನ್ನೂ ಅಗಿದ ಹಾಗೇ ಆಯ್ತು. ಹುರುಳಿಕಾಯಿ ಚೂರು ಹುರುಳಿಕಾಯಿ ಚೂರಾಗಿಯೇ ಇದೆ ಸರ್ವೇಸೌದೆ ಚೂರು ಹಾಗೇ ಉಳಿದಿದೆ ಎಲೆ ಅಡಿಕೆ ಎಲೆ ಅಡಿಕೆಯಾಗಿಯೇ ಇದೆ. ಮಾವ ಕೊಟ್ಟ ಮಾತು, ಮಾತಾಗಿಯೇ ಉಳಿದಿದೆ. ಯಾವುದೂ ಜೀರ್ಣವಾಗಲಿಲ್ಲ ಯಾವುದೂ ಪಚನವಾಗಲಿಲ್ಲ. ಯಾವುದೂ ವಚನವಾಗಲಿಲ್ಲ.

"ಲೇ" ಅಂದ ಶಾಮಣ್ಣ. "ಲೇೇ" ಅಂದ ಶಾಮಣ್ಣ. "ಲೇೇೇ ಅಂದ ಶಾಮಣ್ಣ.

* * *

ಎದ್ದುಹೋಗಿ ಕೈತೊಳೆದುಕೊಂಡು, ಕೊರಡಿಗೆ ಹಸಿದ ಹೊಟ್ಟೆಯಲ್ಲಿ ಪತ್ರಿಕೆ ಓದಲು ಕುಳಿತ.

* * *

ಶಾಮಣ್ಣನ ಹೆಂಡತಿ ಬದುಕುವ ಮಾರ್ಗವನ್ನು ತಂದೆಯಿಂದ ಕಲಿತಾಕೆ. ಒಂದುದಿನ ಅಡಿಗೆ ವ್ಯತ್ಯಾಸವಾದರೆ ಹೀಗೆ ರೇಗಾಡಬೇಕೇ? ವಯಸ್ಸಾದರೆ ತಾನೇ ಬುದ್ಧಿ ಬರುತ್ತದೆಯೇ? ನಮ್ಮಪ್ಪ ಇದನ್ನೇ ತಿಂದು ತೇಗಿ, ಬಾಯಿ ತುಂಬ ಬಯ್ದು, ಜೀವನ ನಡೆಸಲಿಲ್ಲವೇ? ಇವರೂ ಹೀಗೇ ಮಾಡಬಾರದೇ? ಇವರು ಹೀಗೆ ಮಾಡಿದರು

ಎಂದು ನಾನ್ಯಾಕೆ ಹಸಿಯೊಡಲನ್ನು ತ್ರಾಸುಗೊಳಿಸಲಿ ಎಂದು ಆಕೆ ಅರಳಿಗೆ "ಹೀರುಳ್ಳಿ ಉಳಿಯನ್ನು" ಕಲೆಸಿ, ಕಲೆಸಿದ ಪಾತ್ರೆಯಲ್ಲೇ, ಯೋಚಿಸುತ್ತಾ ಯೋಚಿಸುತ್ತಾ, ತಿಂದಳು. ಮಜ್ಜಿಗೆ ಅನ್ನ ತಿನ್ನುವಾಗ ಹುರುಳಿಕಾಯಿ ಪಲ್ಯ ನೆಂಜಿಕೊಂಡಾಗ, "ದಿಟ! ಹುರುಳಿಕಾಯಿ ಸ್ವಲ್ಪ ಬಲಿತಿದೆ. ಸ್ವಲ್ಪ ನಾರಾಗಿದೆ. ಇದು ಹುರುಳಿಕಾಯಲ್ಲ! ಹುರುಳಿಹಣ್ಣು. ಅದು ನನ್ನ ತಪ್ಪೇ! ಎಳೆ ಹುರುಳಿಕಾಯಿ ಬೇಕಾದರೆ ಇವರೇ ಹೋಗಿ ಕೊಂಡು ತಂದರೆ ಬೇಡ ಅನ್ನುತ್ತೇನೆಯೇ? ಅಡಿಗೆ ಮಾಡುಲ್ಲ ಎನ್ನುತ್ತೇನೆಯೇ? ಮನೆ ಬಾಗಿಲಿಗೆ ಬಂದ ತರಕಾರಿ ಕೊಂಡು ಅಡಿಗೆ ಮಾಡಿದರೆ ಈ ಹುಚ್ಚು ರೇಗಾಟವೇಕೆ? ವಯಸ್ಸು ಹೆಚ್ಚಾದಂತೆಲ್ಲಾ ಚಪಲವೂ ಹೆಚ್ಚಾಗುತ್ತಿದೆ ಇವರಿಗೆ. ಇದನ್ನೇ ತಿಂದು ನೊದಲೆಲ್ಲಾ ಜೀರ್ಣಿಸಿಕೊಳ್ಳುತ್ತಿರ ಲಿಲ್ಲವೇ?" ಎಂದೆಲ್ಲಾ ಅಂದುಕೊಳ್ಳುತ್ತಾ ಹತ್ತುವರ್ಷ ಕಿರಿಯಳಾದ ಆಕೆ ಅದನ್ನೆಲ್ಲಾ ತಿಂದು. ಪಾತ್ರೆಗಳನ್ನೆಲ್ಲಾ ತೊಳೆದು, ಅಡಿಗೆಮನೆ ಸಾರಿಸಿ, ದೀಪ ಆರಿಸಿ, ಬಾಗಿಲು ಚಿಲಕ ಹಾಕಿ ಕೊಠಡಿಗೆ ಬಂದಳು.

* * *

ಬಂದ ಐದು ನಿಮಿಷದ ಮೇಲೆ ಅಂದಳು "ಅದೇನೊ ಅಷ್ಟು ಸ್ವಾರಸ್ಯ ವಾಗಿರೋ ಸುದ್ದಿ ಪೇಪರಿನಲ್ಲಿ" ಅಂತ.

ಪೇಪರನ್ನು ತಗ್ಗಿಸಿ, ತಲೆಯನ್ನು ಬಗ್ಗಿಸಿ ಶಾಮಣ್ಣ ಆಕೆಯನ್ನು ನೋಡಿದ, ಕಪ್ಪೆ ನಾಗಕನ್ನಿಕೆಯನ್ನು ನೋಡುವಂತೆ, ಕುರಿ ಕಟುಕನನ್ನು ನೋಡುವಂತೆ. ಅಳಿಯ ಮಾರೀಚನನ್ನು ಕಂಡಂತೆ.

ಕಿರುದನಿಯಲ್ಲಿ, ಪರೀಕ್ಷೆಯಲ್ಲಿ ಬಾಲಕರು ಪರೀಕ್ಷಕರೆದುರಿಗೆ ಉತ್ತರಿಸುವ ದನಿಯಲ್ಲಿ, ಲೋಕಸಭೆಯಲ್ಲಿ ಸಚಿವರು ಆಪತ್ಕಾಲದಲ್ಲಿ ಜವಾಬಿಸುವ ಸ್ವರದಲ್ಲಿ, ಹೇಳಿದ.

"ಲೋಕಸಭೆಯಲ್ಲಿ ಇಂದು ವಿವಾಹವಿಚ್ಛೇದನಕ್ಕೆ ಅನುಮತಿ ಕೊಡಲೋಸುಗ ಒಂದು ಕಾನೂನು ಪಾಸಾಗಿದೆಯಂತೆ. ಅದರ ರೀತಿನೀತಿಗಳನ್ನೂ, ಒಳಿತು ಕೆಡು ಕನ್ನೂ, ಗುಣ ಅವಗುಣಗಳನ್ನೂ ವಿಶದೀಕರಿಸಿದ್ದಾರೆ. ಆ ಕಾನೂನು ಪ್ರಕಾರ ಕೂಡ ಇನ್ನೆರಡು ವರ್ಷ ಈ ಸೆರೆಯಿಂದ ನಾನು ತಪ್ಪಿಸಿಕೊಳ್ಳುವಂತಿಲ್ಲ. ನಿನ್ನ ಪುಣ್ಯ ನೀನೂ ಇಲ್ಲ" ಎಂದು.

ಹೇಳಿದನಂತರ ತಿರುಗಿ ಪತ್ರಿಕೆ ಎತ್ತಿದ. ತಲೆಯನ್ನೂ ಎತ್ತಿದ. ಓದಲು ಶುರುಮಾಡಿದ.

* * *

ಅಮೇರಿಕಾದಲ್ಲಿ ವಿವಾಹವಿಚ್ಛೇದನಗಳು ಇತ್ತೀಚೀಚೆಗೆ ಹೆಚ್ಚಾಗಿವೆಯಂತೆ. ಹಾಲಿವುಡ್ಡಿನ ತರುಣಿತಾರೆಯರು, ಎಣ್ಣೆ ಉಣ್ಣೆಯ ಕೋಟ್ಯಾಧೀಶ್ವರರು, ಬಿರುದಾಂಕಿತ ಬಡವ ಯೂರೋಪಿನವರು ಇರುವತನಕ ಅಲ್ಲಿನ ವಿವಾಹವಿಚ್ಛೇದನಗಳ ಸಂಖ್ಯೆ ಲೋಕದಲ್ಲಿಯೇ ಅಗ್ರಸ್ಥಾನಪಡೆಯುತ್ತದೆ. ಮೂಲೋರ್ಕಗಳೇ ತೋಳು ತೋಳು ತೆಕ್ಕೆಗೂಡಿಬರಲಿ ಅದರೂ ಈ ವಿವಾಹದವಿಚ್ಛೇದನದಲ್ಲಿ ನಮ್ಮ ಅಮೇರಿಕಾ ಜತೆಗೆ ಸರಿಸಾಟಿ ಯಾವುದೂ ಇಲ್ಲ ಎಂದು ಒಂದು ಲೇಖನ. ಇದನ್ನೋದಿದ ಶಾಮಣ್ಣ ಸಂಪೂರ್ಣವಾಗಿ ಅನುಮೋದಿಸಿದ.

ಆದರೆ ಅದರ ಕೆಳಗೇ ಇನ್ನೊಂದುಲೇಖನ. ಸ್ವಿಟ್ಸರ್‌ಲೆಂಡಿನಲ್ಲಿ ವಿವಾಹ ವಿಚ್ಛೇದನಗಳು ಅಮೇರಿಕಾಕ್ಕೆ ಏನೂ ಕಡಿಮೆಯಿಲ್ಲ ಎಂದು ಲೇಖನ. ಗಡಿಯಾರಗಳನ್ನು ಮಾಡುವುದು,–ವಿದ್ಯುಚ್ಛಕ್ತಿಯ ಯಂತ್ರಗಳನ್ನು ನಿರ್ಮಿಸುವುದು,— ಹಾಲು ಹಾಲುಕೆನೆ ತಯಾರಿಕೆ,— ಈ ಸೋಜಿಗ ನೋಡಿ! ಪ್ರಪಂಚದಲ್ಲೇ ಹೆಸರಾಂತ ಮಕ್ಕಳ ಆಸ್ಪತ್ರೆ. ಆದರೆ ತಂದೆ ತಾಯಿಯರ ಆಸ್ಪತ್ರೆಗಳು ಅಷ್ಟಾಗಿ ಇಲ್ಲ. ಅಂದ ಮೇಲೆ ಅಲ್ಲಿನ ಜನಜೀವನ, ಕೈಗಾರಿಕೆಗೆ ಸುಳುಸಿಕ್ಕುತ್ತಲ್ಲವೇ? ಇವೇ ಸ್ವಿಟ್ಸರ್ಲೆಂಡಿನ ಯಶಸ್ಸು ಅನ್ನುತ್ತಿದ್ದ ಶಾಮಣ್ಣನಿಗೆ ಅಲ್ಲಿನ ವಿವಾಹವಿಚ್ಛೇದನದ ಅಂಕಿ ಅಂಶಗಳು ದಿಟವಾಗಿಯೂ ಸ್ಫೂರ್ತಿಕಾರಕವಾಯ್ತು.

ಶಾಮಣ್ಣ ಯೋಚಿಸಿದ. ನಮ್ಮ ದೇಶದಲ್ಲಿ ವಿವಾಹವಿಚ್ಛೇದನ ಮೊದಲೇ ಯಾಕೆ ಬರಲಿಲ್ಲ? ಹಿಂದಿನಕಾಲದಿಂದ ಬೇಜಾರಾದಾಗ ಸಿದ್ದೋಜಿರಾಯನು ತನ್ನ ಹೆಂಡತಿ ಜೀವೂಬಾಯಿಯನ್ನು, ಕತ್ತು ಅದುಮಿ ಜೀವವಿಲ್ಲದಂತೆ ಮಾಡಿ, ಮೂಟೆ ಕಟ್ಟಿ ಮಾವನಮನೆಗೆ "ಈ ಬಾಯಿ ಈಗ ಮುಚ್ಚಿದೆ. ಮುಂದಿನ ಕಾರ್ಯಕ್ರಮಗಳನ್ನೂ ನೀವೇ ನಿಮ್ಮ ಖರ್ಚಿನಲ್ಲಿ ಮಾಡಿಕೊಳ್ಳಿ" ಎಂದು ಪತ್ರದೊಡನೆ ಕಳಿಸುತ್ತಿದ್ದನಂತೆ, ಆಕೆಯನ್ನು ತೌರಿಗೆ—

ಜೆಂಗಯ್ಯಶೆಟ್ಟಿಯು ತೀರ್ಥಯಾತ್ರೆಗೆ ಹೋಗಿ, "ಹರಿದ್ವಾರದಲ್ಲಿ ಕಾಲುಜಾರಿ ಮಡುವಿನಲ್ಲಿ ಮುಳುಗಿ ನಿಮ್ಮ ಮಗಳು ಕೈಲಾಸವನ್ನು ಸೇರಿದಳು, ಹಾಗೆ ಕೈಲಾಸ ಸೇರುವಾಗ, ನೀವು ಕೊಟ್ಟ ಚಿನ್ನ ಬೆಳ್ಳಿಯನ್ನೆಲ್ಲಾ ಧರಿಸಿಯೇ ಹೋದಳು" ಎಂದು, ಹಿಂತಿರುಗಿದ ನಂತರ ಮಾವ ಮಾರೀಚನಿಗೆ ಕರಿಯೋಲೆಯನ್ನು ನಪ್ಪಪೈಡುಮಾಡಿ ಕಳಿಸುತ್ತಿದ್ದನಂತೆ.

ಬೋರಪ್ಪ ಮಾಜಿಮಾವನಿಗೆ ಪತ್ರಬರೆದು "ಮೊನ್ನೆ ನಮ್ಮ ಕೇರಿಲಿ ಭಾವಿ ತೋಡುತ್ತಿದ್ದಾಗ, ನಿಮ್ಮ ಮಗಳು ಕೆಳಗಿಳಿದಾಗ, ಮೇಲಿಂದ ಮಣ್ಣು ಕುಸಿದು ಬಿದ್ದು, ಭಾವಿಯ ಕೆಲಸವೂ ಕೆಟ್ಟುಹೋಯ್ತು, ನಿಮ್ಮ ಮಗಳೂ ಇಲ್ಲವಾದಳು ಕಾರಣ ನಾನು ಕೂಡುವಳಿಯಲ್ಲಿ ಕೊಟ್ಟ ಹಣವನ್ನು ನೀವು ತಕ್ಷಣ ಕಳಿಸಿ. ನಾನು ಬೇರೆ ಕೂಡುವಳಿ ಮಾಡಿಕೋಬೇಕು" ಎಂದು ತಿಳಿಸುತ್ತಿದ್ದನಂತೆ.


ಶಂಕರ್‌ಶಾಸ್ತ್ರಿ ಕಾಶೀಯಾತ್ರೆಗೆ ಹೋಗಿ, ರಾಮೇಶ್ವರಯಾತ್ರೆ ಮುಗಿಸಿಕೊಂಡು ಮನೆಗೆ ಬಂದಕೂಡಲೇ ಪಾಣಿಗ್ರಹಣಿಸಿದ ಪತ್ನಿಗೆ ದೇವರ ಪ್ರಸಾದ ತಿನ್ನಿಸಿ ತಿನ್ನಿಸಿ ಆಕೆ ಅತಿಸಾರದಿಂದ ಬಲುಬೇಗ ಸಾಯುಜ್ಯವನ್ನು ನೇರಿದಂತೆ ಮಾಡಿ, ಆಕೆಯ ಅಪರ ಕರ್ಮಗಳಿಗೆಂದು ಊರವರ ಹತ್ತಿರ ಶೇಖರಿಸಿದ ಹಣದಲ್ಲಿ ಹೊಸಮನೆ ಹೊಸಮದುವೆ ಮಾಡಿಕೊಳ್ಳುತ್ತಿದ್ದನಂತೆ.

ಆಗನ್ನಿಸಿತು ಶಾಮಣ್ಣನಿಗೆ. ನಮ್ಮ ಸಂಸ್ಕೃತಿಯ ಪ್ರಕಾರ ಬಂದ ಬೇನೆಯನ್ನು ಪರಿಹರಿಸಿಕೊಳ್ಳುವುದು, ಈ ವಿವಾಹವಿಚ್ಛೇದನಕ್ಕಿಂತ ಎಷ್ಟೋ ಒಳಿತು. ಎಷ್ಟೋ ಕ್ಷೇಮಕಾರಿ. ನಮ್ಮ ಪೂರ್ವಪದ್ಧತಿಯಪ್ರಕಾರ ಒಮ್ಮೆ ತೊಲಗಿದ ಶನಿ ಮರುಬರುವಂತಿಲ್ಲ. ಆದರೆ ಈ ವಿವಾಹವಿಚ್ಛೇದನದಲ್ಲಿ, ಆಲೆಮನೆಯ ದೆವ್ವದಂತೆ, ಕಿಟಕಿಯಲ್ಲಿ ಹೋದ ಹೆಂಡತಿ, ಬಾಗಿಲಲ್ಲಿ ನಾದಿನಿಯಾಗಿಯೇ ಬರಬಹುದು. ಸಂಜೆ ಸಾಗಿದ ಹೆಂಡತಿ ಬೆಳಗಾಗುವ ಹೊತ್ತಿಗೆ ಬಂಧುವಾಗಿಯೆ ಹಿಂತಿರುಗಬಹುದು.

ಲೋಕಸಭೆಗೆ ಹೇಗೆ ಈ ತಿಳಿವಳಿಕೆ ಕೊಡಬಹುದು? ಹಾಗೂ ಏಕೆ ತಿಳಿವಳಿಕೆ ಕೊಡಬೇಕು? ಕಾನೂನು ಕಾನೂನೇ! ಕಾರ್ಯ ಕಾರ್ಯಾನೇ ಅಲ್ಲವೇ?

—ಆ ಹೊತ್ತಿಗೆ ಆಕೆ ಗೊರಕೆ ಹುಯ್ಯುತ್ತಿದ್ದಳು.

"ನೊಂದಯ್ಯ"



ಮಾಣಿ:—"ನೋಡೊ....ಅವತ್ತು ಮ್ಯಾನೇಜರ ಹತ್ತಿರ ಚಾಡಿ ಹೇಳಿದ್ದನಲ್ಲಾ....
....ನೀರ್ಕೊಟ್ಟು ಅರ್ಧಗಂಟೆಯಿಂದ ಕಾಯ್ಸಿದೀನಿ"....

ಸುಶೀಲಮ್ಮನ ಖಾಯಿಲೆ

ಸುಶೀಲಮ್ಮನವರು ಗಡಿಯಾರ ನೋಡುತ್ತಾರೆ: ಎಂಟೂಕಾಲು! ಯಜಮಾನರಿನ್ನೂ ಎದ್ದೇ ಇಲ್ಲ...ಏನು ಬಂತು, ಇವತ್ತು? ಏಳಿ, ಅಂದ್ರೆ? ಏಳಿ!... ಹಾ! ಜ್ವರ? ಹೌದೇ....ಜ್ವರ! ದೇವರೇ!....ಎಂದೂ ಇಲ್ಲದ್ದು ಇಂದೇಕೆ ಬಂತು? ತಲೆನೋವೆ? ಸಿಡಿತವೆ? ಏಳುವುದಕ್ಕಾಗುವುದಿಲ್ಲವೆ? ಆಫೀಸಿಗೆ ರಜವೆ?....ಹುಂ ... ಈ ಜ್ವರ ಸಹಿತ ಹೇಗೆ ಹೋಗುತ್ತೀರಿ? ಬೇಡ, ಬೇಡ, ಮೆಲ್ಲಗೆ ಏಳಿ ...ಕೈ ಕೊಡಿ, ಇಲ್ಲಿ....ಬಿಸಿ ನೀರು ಕೊಡುತ್ತೇನೆ....ಕಾಫಿ ಬೇಡ, ಓವಲ್ಟೀನ್ ಇದೆ....ಮತ್ತೆ, ಮಲಗುತ್ತೀರಾ? ಹಣೆಗೆ ಲವಂಗದ ಪಟ್ಟು ಹಾಕಲೆ? ಶುಂಠಿ ಕಷಾಯ? ಓಮಂ ವಾಟರ್? ಆಸ್ಪ್ರೋ ಗುಳಿಗೆ? ಉಲ್ಲನ್ ಸ್ವೆಟರ್ ಕೊಡಲೆ? ಹಾಸನ್ ಟೋಪಿ? ಇನ್ನೊಂದು ರಗ್ಗು? ಕಿಟಕಿ ಹಾಕಲೇಬೇಕು, ಸುಮ್ಮನಿರಿ, ಅಂದ್ರೆ....ಮಾತಾಡಬೇಡಿ....ನಿಂಬೆಹಣ್ಣು? ಮೆಣಸಿನ ಸಾರು? ಜೀರಕಾದಿ? ಸಿಬಸಾಲು? ನೀಲಗಿರಿ ತೈಲ? ಕರಿ ಬೇವಿನ ಸೊಪ್ಪು? ತುಲಸಿ ತಿನ್ನಿ....ಶಂಕರೂನ ಡಾಕ್ಟರ್ ಮನೆಗೆ ಕಳುಹಿಸುತ್ತೇನೆ, ಇಷ್ಟರಲ್ಲೇ ಅವರೂ ಮನೆ ಬಿಟ್ಟು ಹೊರಟುಬಿಟ್ಟಾರು

“ಅಯ್ಯೋ! ದೇವರೆ! ದಿನವೂ ಇಷ್ಟು ಹೊತ್ತಿಗೆ ಅಚ್ಚುಕಟ್ಟಾಗಿ ಸ್ನಾನ ಮುಗಿಸಿ, ಪೇಪರೋದುತ್ತಾ ಕೂತಿರುವ ಪ್ರಾಣಿ....ಹೃದಯಕ್ಕೇನಾದರೂ ಅಪಾಯವೋ ಏನೊ....ಇನ್ಷೂರ್ ಮಾಡಬೇಡಿ ಅಂತ ಬೊಡಕೊಂಡೆ...ನಿನ್ನೆ ಆ ಕಾನ್‌ವೊಕೇಷನ್ ಫೋಟೋನ ಆಕೆಗೆ ಬೇರೆ ತೋರಿಸಿದೆ....ದೃಷ್ಟಿಯೇ ಇರಬೇಕು ಆಕೆಯದು....ಮಂಗಳವಾರ ಬೇರೆ ಇವತ್ತು....ಟೆನ್ನಿಸ್ ಆಡುತ್ತ ಕುಸಿದುಬಿದ್ದರಂತಲ್ಲಾ....ಲೆಕ್ಚರ್ ಕೊಡುತ್ತಾ ಕೂತರಂತಲ್ಲಾ....ಬಸ್‌ನಲ್ಲೇ ಹೋಯಿತಂತಲ್ಲಾ....ಕುರ್ಚಿಯಲ್ಲೇ ಕುತ್ತಿಗೆಗೆ ಬಂತಂತಲ್ಲಾ....ಡಾಕ್ಟರು ಇರುತ್ತಾರೋ ಏನೋ? ಇದ್ದರೂ ಬರ್ತಾರೋ ಏನೊ? ಶಂಕರು ಏನು ಹೇಳುತ್ತಾನೊ? ವೆಂಕಟರಮಣಾ! ....ಆ! ಇಗೊ, ಬಂದೆ.. ಈ ಲೇಹ ತಿನ್ನಿ.. ವಿಭೂತಿ ಹಚ್ಚಿಕೊಳ್ಳಿ....ಕಷಾಯ ಕುಡಿಯಿರಿ....ಅಮೃತಾಂಜನ್ ಸವರುತ್ತೇನೆ ವೀಳ್ಯದೆಲೆಗೆ....”

“ಏನೂ ಇಲ್ಲ, ಕಣೆ....ಸುಮ್ಮನೆ, ನಿನ್ನ ಅವಾಂತರ, ಅಷ್ಟೆ. ನಿನ್ನೆ ಆ ಮೀಟಿಂಗಿಗೆ ಹೋಗಿ, ಆತನ ಭಾಷಣ ಕೇಳಿದನಲ್ಲಾ, ಅದಕ್ಕೇ ಕೊಂಚ ಸುಸ್ತು, ಅಷ್ಟೆ. ಒಂಬತ್ತೂವರೆ....ಪರವಾ ಇಲ್ಲ....ಆಫೀಸಿಗೆ....”

"ಬೇಡ, ಬೇಡ, ದಮ್ಮಯ್ಯ ಬೇಡ....ಮಲಗೇ ಇರಿ ನನ್ನೆದೆ ಹೊಡೆದು ಕೊಳ್ಳುತ್ತಾ ಇದೆ....ತಾಯಿಗೆ ಕಾಗದ ಬರೆದು ಅವಳನ್ನ ಕರೆಯಿಸಿಕೊಳ್ಳುತ್ತೇನೆ ... ತಮ್ಮ ಸೋಮೂನೂ ಬರಲಿ....ನನಗೇಕೋ ಭಯವಾಗ್ತಾ ಇದೆ ...ಅಗೊ, ಡಾಕ್ಟರು ಬಂದರು....ಡಾಕ್ಟರೇ !...."

"ಅಳಬೇಡ್ರಮ್ಮ! ಎಲ್ಲಿ? ನಿಮಗೇನ್ರಿ ಬಂತು? ಏಳಿರಿ! ಕೂತುಕೊಳ್ಳಿ ಹಾಸಿಗೆ ಮೇಲೆ....ಜ್ವರವೇನೂ ಇಲ್ಲ....ತಲೆನೋವೆಲ್ಲಿರಿ ಬರುತ್ತೆ ನಿಮಗೆ....ಅಜೀರ್ಣ ಮತ್ತೇನ್ರಿ ಧಾಡಿ....ಆಫೀಸಿಗೆ ಹೋಗಿ ರೆಸ್ಟ್ ತೆಗೆದುಕೊಳ್ಳಿ ..."


"ಬೇಡಿ, ಡಾಕ್ಟರೆ! ಅವರು ನಾನು ಎಷ್ಟು ಹೇಳಿದರೂ ಮೈ ನೋಡಿಕೊಳ್ಳು ವುದೇ ಇಲ್ಲ....ನಿನ್ನೆ ಊಟ ಮಾಡುವಾಗ ಸಾರು ಕಲಸಿಕೊಳ್ಳುತ್ತಲೂ, ವಾಂತಿ ಬರುತ್ತದೆ, ಬೇಡ ಅಂದರು. ಪಲ್ಯ ಸಪ್ಪೆ ಎಂದರು. ಅನ್ನ ತಿಂದರೆ ಹೊಟ್ಟೆನೋವು ಬರುತ್ತೆ, ಅಂದರು. ಇವತ್ತು ಎದ್ದದ್ದೇ ಎಂಟೂಕಾಲು ಗಂಟೆ....ಒಂದು ಇಂಜಕ್ಷನ್ ಕೊಡಿ....ಮೂರು ಹೊತ್ತಿಗೆ ಔಷಧಿ....ಯಾವುದಾದರೂ ಟಾನಿಕ್ಕು ಬರೆದುಕೊಡಿ ..."

"ಕೊಡುತ್ತೇನೆ ತಾಳಿ ಇಕೊ! ಚೀಟಿ"

"ನನ್ನ ಹೆಸರು ಬರೆದಿದೀರಲ್ಲಾ, ಚೀಟೀಲಿ....ಡಾಕ್ಟರೆ! ನಿಮ್ಮ ಗಲಾಟೇಲಿ ಖಾಯಿಲೆ ಯಾರಿಗೆ ಅನ್ನುವುದನ್ನೇ ಮರೆತಿರಲ್ಲಾ...."

"ಮರೆತಿಲ್ಲ! ನಿಮಗೇ ಆ ಟಾನಿಕ್ಕು....ಸುಮ್ಮನೆ ಪರದಾಡಬೇಡಿ. ಹೋಗಿ ನಿಮ್ಮ ಕೆಲಸ ನೋಡಿ....ಇವರನ್ನ ಅವರ ಆಫೀಸಿಗೆ ಕಳುಹಿಸಿ. ಪಾಪ! ಹಾಯಾಗಿ ಹೋಗಿಬರಲಿ."

—ರುದ್ರಮ್ಮ.



ಈ ರೇಡಿಯೋ ಮಾಸದ ಪ್ರೋಗ್ರಾಂನಲ್ಲಿ ಬರೀ ನಗು ಒಂದೇ ಕೇಳಿಸುತ್ತೆ ಅಲ್ಲವೇನೋ!

ದಫೇದಾರ್ ದೇರಣ್ಣೋರು

"ಭೂತ ತೃಪ್ತಿ"

ನನ್ನ ಪಾಡಿಗೆ ನಾನು ನಿಂತಿದ್ದೆ. 'ಓ ಲಕ್ಷ್ಮಣಾಂತ ಕೂಗಿದೆ' ಅಲ್ಲೆ ಹೋಗುತ್ತಿದ್ದ ಲಕ್ಷ್ಮಣ ನಿಂತ. ಬಂದು ನನ್ನೆದುರು ನಿಂತ. ಬಹು ದಿನಕ್ಕೆ ಸಿಕ್ಕಿದ್ದ ಲಕ್ಷ್ಮಣ.

"ಅರ್ಜೆಂಟು ಇಗೋ ಈಗ ಬಂದೆ — ಒಂದೇ ರೂಪಾಯಿ ಸಾಲ್ದು ಎಲೆಕ್ಟ್ರಿಕ್ ಬಿಲ್ ಕಟ್ಟೋಕೆ ಮನೇಲಿ ಕೋಟೊಳಗೆ ಮಟ್ತು ಬಂದೆ— ನಾಳೆ ಖಂಡಿತ ಕೊಡ್ತೀನಿ, ನಮ್ಮಪ್ಪನಾಣೆ ಕೊಡ್ತೀನಿ, ಕೊಡದೆ ಇದ್ರೆ ನನ್ನ ಲಕ್ಷ್ಮಣಾಂತ ಕರಿಬೇಡ" ಅಂತ ಅವಸರದಲ್ಲಿ ರೂಪಾಯಿ ಒಯ್ದು ಮೂರುತಿಂಗಳಾದಮೇಲೆ ನನಗೆ ಈಗ ರಸ್ತೆನಲ್ಲಿ ಸಿಕ್ಕಿದ್ದ ಹೇಗೆ ಬಿಡಲಿ? ಹಿಡಿದ ಸೈಕಲ್ ಹಾಗೇ ಅಡ್ಡಲಾಗೆಳೆದು ಅಡ್ಡಗಟ್ಟಿ "ಓ ಲಕ್ಷ್ಮಣಾ" ಎಂದು ಕೂಗಿದಾಗಲೇ ಅವನು ನಿಂತದ್ದು.

ಸರಿ ಯಥಾಪ್ರಕಾರ ಹಲ್ಲುಗಿರಿದ, ಕೈ ಕೈ ತಿಕ್ಕಿಕೊಂಡ, ಬೈಸಿಕಲ್ಲಿನ ಹಿಡಿ ತಿರುಚಿದ-ಅದರ ಬೆಲ್ಲಿನ ಗಂಟೆಯ ತಿರುಪಳಿ ತಿರುಚಿದ-ಅದು ಯಥಾಪ್ರಕಾರ ಸಡಿಲವಾಗಿದ್ದು ಕಳಚಿಬಿತ್ತು-ಒಂದೇ ಶಬ್ದ 'ಸಾರಿ' ಅಂತ ಅಂದನೇ ಹೊರ್ತು ಹುಡುಕಲಿಲ್ಲ. ಅವನ ಕೈಗೆ ಬಂದ ಬೆಲ್ಲಿನ ಗಣಗಣ ಶಬ್ದದ ಬಟ್ಟಲನ್ನು ನನ್ನ ಜೇಬಿಗೆ ಹಾಕಿ ಕೈ ಜಾಡಿಸಿಕೊಂಡ. ಬೈಸಿಕಲ್ಲು ಅವನಿಗೇ ಒರಗಿಸಿ ಮಣ್ಣಲ್ಲಿ ಬಿದ್ದ ಬೆಲ್ಲಿನ ತಿರುಪಳಿಗೆ ಪರದಾಡತೊಡಗಿದೆ. "ಅದೆಲ್ಲಿ ಸಿಗುತ್ತೆ ಬರೀಭ್ರಾಂತು ಅದಕ್ಕೇ ನಾನು ಹುಡುಕುವ ಗೋಜಿಗೆ ಹೋಗಲಿಲ್ಲ" ಎಂದ ಲಕ್ಷ್ಮಣ ನಿಶ್ಚಿಂತೆಯಿಂದ. "ಹೋಗಲಿ ಬಿಡು ಆಕಡೆ ಕಂಟೋನ್ಮೆಂಟಿಗೆ ಬಂದಾಗ ಜ್ಞಾಪಿಸು-ನನ್ನ ಸ್ನೇಹಿತನ ಸೈಕಲ್ ಅಂಗಡೀಲಿ ಕಮ್ಮಿ ಬೆಲೆಗೆ ಕೊಡಿಸ್ತೀನಿ ...ಇಲ್ದೆ ಇದ್ರೆ ನಾನೇ ಕದ್ದು ಕೊಡ್ತೀನಿ" ಎಂದು ಮತ್ತೆ ನನ್ನನ್ನೇ ಪೀಡಿಸಿದ ಲಕ್ಷ್ಮಣ.

ಅದು ಹಾಳಾಗಿಹೋಗಲಿ—ಇವತ್ತು ಇವನ ಹತ್ತಿರ ರೂಪಾಯಿ ವಸೂಲಿ ಮಾಡದೆ ಬಿಟ್ಟರೆ ಮತ್ತೆ ನನ್ನ ಕೈಗೆ ಇವ ಸಿಕ್ಕುವುದುಂಟೆ? ಮಹಾ ಕಳ್ಳ ಸುಳ್ಳ ಇವನು ಎಂದು ಈಗ ನನಗೆ ಅರ್ಥವಾಗ್ತಾ ಇದೆ. ಬಿಟ್ಟರೆ ಕೆಟ್ಟೆ ಏನೂ ಇಲ್ಲದಿದ್ದರೆ ಅವನನ್ನು ನಾಲ್ಕುಮಾತಿನಿಂದ ಅಂದಾದರೂ ತೃಪ್ತಿಪಟ್ಕೊಳ್ದೆ ಇದ್ರೆ ನಾಲಿಗೆಗೆ ತೃಪ್ತಿಯಿಲ್ಲ.

"ಅಯ್ಯಾ ಲಕ್ಷ್ಮಣಾ—ಮನುಷ್ಯನಿಗೆ ನಾಲಿಗೆ ಒಂದೇ ಇರಬೇಕು ಹೌದೊ ಅಲ್ಲವೊ ಹೇಳು"

"ಅಲ್ಲ—ಒಂದು ಹಿರಿನಾಲಿಗೆ—ಇನ್ನೊಂದು ಕಿರಿನಾಲಿಗೇಂತ ಸಾಧಾರಣ ಮನುಷ್ಯನಿಗೆ ಎರಡಿರುತ್ತೆ ಅಲ್ವೆ?"

ಎಂದು ಮೊದಲಿನ ಪಟ್ಟನ್ನೆ ನನಗೇ ತೊಡರುವಂತೆ ಮಾಡಿದ ಎಲಾ ಖದೀಮ ಹೀಗೆ ಎಷ್ಟು ಜನಕ್ಕೆ ಇವನು ಮೋಸಮಾಡಿದ್ದಾನೆಯೊ? ಇವನನ್ನು ಪೋಲೀಸಿಗೆ ಕೊಟ್ಟುಬಿಡಬೇಕು. ಎಂದು ನಾನು ನಿರ್ಧಾರಕ್ಕೆ ಬರುವ ಹೊತ್ತಿಗೆ ದೇವರಹಾಗೆ ಒಬ್ಬ ಕಾನ್ಸ್ಟೇಬಲ್ ಬಂದು ನನ್ನೆದುರಿಗೆ ನಿಂತ ಕರಿಯ ಎತ್ತರದ ಭಾರೀ ಆಳು. ಕಳ್ಳರು ಕಂಡರೆ ಹೆದರೇ ಓಡಬೇಕು ಅಂತಹ ವ್ಯಕ್ತಿತ್ವ. ಅವನಿಗೆ ಹೇಗೆ ನಾನು ಈ ಲಕ್ಷ್ಮಣನನ್ನು ಹಿಡಿದುಕೊಡಲು ಹವಣಿಸಿದ್ದು ಗೊತ್ತಾಯಿತು? ಬಹಳ ಶಹಣೆಯರು ನಮ್ಮ ಪೋಲೀಸರು

ಅವನೇ ಮಾತಾಡಿದ ಆ ಪೋಲೀಸಿನವ—

"ಬನ್ರೀ" ಪರಟು ದರ್ಬಾರಿ ಧ್ವನಿ.

"ಇಕೊ ಈ ಲಕ್ಷ್ಮಣ ಇದಾನಲ್ಲಾ ಅವನನ್ನ " ಎಂದು ಹೇಳುವುದರಲ್ಲಿದ್ದೆ, ಅಷ್ಟರಲ್ಲಿ ಅವನು ನನ್ನ ಸೈಕಲ್ ಹ್ಯಾಂಡಲ್ ಹಿಡಿದು ದರದರನೆ ಎಳೆದ.

"ಅದೆಲ್ಲಾ ಮಾತು ಕೋರ್ಟಲ್ಲಿ ಹೇಳ್ರಿ– ರಸ್ತೇಲಿ ಓಡಾಡಬೇಕು. ಸೈಕಲ್ ಅಡ್ಡನಿಲ್ಸಿ ಟ್ರಾಫಿಕ್‌ಗೆ ತೊಂದರೆಮಾಡಬಾರದು—ನಡೀರಿ ಪೋಲೀಸ್‌ಸ್ಟೇಷನ್‌ಗೆ"

—ನಾನು ಬೆವತೆ, ಲಕ್ಷ್ಮಣ ಹುಬ್ಬು ಏರಿಸಿ ನಕ್ಕ. ಅವನೂ ನನ್ನ ಜೊತೆ ಮಾತಲ್ಲಿ ಪಾಲುದಾರ ಅವನನ್ನೇಕೆ ಈ ಕನಿಷ್ಟಬಿಲ್ಲೆ ಹಿಡಿಯಲಿಲ್ಲ? ಕಳ್ಳರಿಗೇ ಕಾಲ ಈಗ. ಈ ಹೊತ್ತಿಗೆ ಲಕ್ಷ್ಮಣ "ಬುಳ್ಳಪ್ಪಾ ಸ್ಟೇಷನ್ನಾಗ್ಯಾರೌರೆ?" ಎಂದು ಈ ಪೋಲಿಸನ್ನ ಕೇಳಿದ. ಆ ಬುಳ್ಳಪ್ಪನು "ದಫೆದಾರ್ರು ದೇರಣ್ಣೋರೌರೆ" ಎಂದ. "ನಾ ಬತ್ತೀನಿ ಆಮೇಲೆ ನಿನ್ನ ನೋಡ್ತಿನಪ್ಪಾ ಚೀರಿಯೋ" ಎಂದು ಸೀಟಿ ಹೊಡೆಯುತ್ತಾ ಹೊರಟೇಹೋದ ಲಕ್ಷ್ಮಣ.

ನಾನು—ಪೋಲೀಸಿನವ, ಇನ್ನು ಹೆಚ್ಚು ಮಾತಾಡಿದರೆ ಮಂದಿ ಸುತ್ತಾ ಮುತ್ತಾ ಸೇರ್ತಾರೆ — ನಡುರಸ್ತೆ — ಎಂಥಾ ವಿಪತ್ತಿಗೆ ಸಿಕ್ಕಿಹಾಕ್ಕೊಂಡೆನಲ್ಲಾ. ಒಂದೇ ಧೈರ್ಯ — ದಫೆದಾರ್ರು ದೇರಣ್ಣೋರು ಗುರ್ತು ಅವರ ಹತ್ತಿರ ಹೋದರೆ ಬಿಡುಗಡೆ ಖಂಡಿತ, ಆದರೂ ಎಂತಹ ಅವಮಾನ! ಲಕ್ಷ್ಮಣ ಕೈಕೊಟ್ಟನಲ್ಲಾ ಒಂದು ರೂಪಾಯಿ! ಹೊಟ್ಟೆ ಉರಿ.

"ಅರೆ—ನಡೀರಿ ..." ಅದೇ ಜಬರದಸ್ತಿ.

"ಅಲ್ಲಪ್ಪಾ—ಸೈಕಲ್ಲು ಇದ್ದಾಗ ರಸ್ತೇಲಿ ನಿಲ್ಲಬಹುದಲ್ಲಾ ಕೊಂಚಹೊತ್ತು—ನನಗೇ ರೂಲ್ಸು ಹೇಳಿಕೊಡ್ತೀಯ"

"....ಹೌದು ಸೈಕಲ್ ನಿಲ್ಲಿಸ್ಕೊಂಡು ನೀವು ರಸ್ತೆಮ್ಯಾಲೆ ಮಲಿಕ್ಕೊಳ್ಳಿ—ಅದೆಲ್ಲಾ ಇಲ್ಲಿ ನಡೀರೀಂದ್ರೇ—ಕಲ್ತೋರು ನಿಮಗೆ ರೂಲ್ಸು ತಿಳೀದ—ಟ್ರಾಫಿಕ್ ತೊಂದ್ರೆಮಾಡ್ತಾ ಇದ್ರೆ ನಾನು ಸುಮ್ಕೆ ಇರ್ತಾ?....ನಡೀರಿ...."

ಗ್ರಹಚಾರ ಅವನ ಹಿಂದೆ ಸೈಕಲ್ ಎಳೆದುಕೊಂಡು ಹೊರಟೆ ದ|| ದೇರೆ ಣ್ಣೋರ ಹತ್ತಿರ ಕಾನೂನು ಕಾಯಿದೆ ವಿಚಾರ ಪುಂಖಾನು ಪುಂಖವಾಗಿ ಶಂಖ ಹೊಡೆದ ನಾನು ಅಪರಾಧಮಾಡಿ ಅವರೆದುರಿಗೆ ಕೈಕಟ್ಟಿ ನಿಲ್ಲಬೇಕೆ? ಅದೂ ಕೇವಲ ಒಬ್ಬ ಕಾನಿಸ್ಟೆಬಲ್ಲು ನನ್ನ ಎಳೆದೊಯ್ಯುವುದೆ? ಅವಮಾನ — ಅನ್ಯಾಯ. ಛೆ!!! ಇದಿಷ್ಟಕ್ಕೂ ಆ ತಸ್ಕರ ಲಕ್ಷ್ಮಣನೇ ಕಾರಣ, ಪಾಪೀ ಇನ್ನೊಮ್ಮೆ ಸಿಗಲಿ.

ಒಂದೊಂದಾಗಿ ಪೋಲೀಸ್ ಸ್ಟೇಷನ್ ಮೆಟ್ಟಲು ಹತ್ತುವಾಗ ಬಹು ವ್ಯಥೆ ಯಾಯಿತು. ಎಂದೂ ನಾನು ಕಾನೂನು ಮುರಿದವನೇ ಅಲ್ಲ. ಹಳೆಯ ಸಾಲ ಬಾಕಿ ವಸೂಲಿ, ಒಂದೇ ರೂಪಾಯಿ ಓ! ಲಕ್ಷ್ಮಣಾ - ಎಂಥಾ ಕೈಕೊಟ್ಟೆಯೋ ಅವನ ಕಣ್ ಸೂಚನೆಯಿಂದಲೇ ಈ ಧಾಂಡಿಗ ಬಂದು ನನ್ನ ಹಿಡಿದೊಯ್ಯುತ್ತಿರ ಬಹುದೆ? ಇರಬಹುದು. ಇವರದೆಲ್ಲಾ ಒಂದೇ ಗ್ಯಾಂಗು. ಒಳಹೊಕ್ಕೆ ನಾ ಕಂಡ ದೃಶ್ಯ ...ಹಿರಿಯ ವ್ಯಕ್ತಿ ದಫೇದಾರ್ ದೇರಣ್ಣೋರು,— ನನ್ನ ಹೆಂಡ್ತಿಯೂ ಶ್ರೀಯುತರ ಸಹಧರ್ಮಿಣಿ ಸೌ|| ಸಾವಿತ್ರಮ್ಮನವರೂ ದೋಸ್ತಿ. ನಾನೂ ಅವರೂ ಕೂಡ ದೋಸ್ತಿಗಳೇ. ಬಿಡುಗಡೆ ಬಹು ಸುಲಭ—ದೇರಣ್ಣೋರು ಕಾಲು ಮೇಜಿನ ಮೇಲೆ ಚಾಚಿ – ತಲೆ ಕುರ್ಚಿಗೆ ಒರಗಿಸಿ, ದಪ್ಪ ಪೇಟ ಹಣೆಯ ತುಂಬಾ ಮುಚ್ಚಿ, ಮಂಡಿ ಸಿದ್ದರು ಕಾಲಾತ್ಮಕವಾಗಿ ತೂಕಡಿಸುತ್ತಾ. ಶ್ರೀಯುತರನ್ನು ನೋಡಿದ್ದು ವಿಪತ್ತಿ ನಲ್ಲಿರುವ ಗಜೇಂದ್ರನಿಗೆ ಗರುಡನ ಮೇಲೆ ಕೂತು ಹಾರಿ ಬಂದ ವಿಷ್ಣುವನ್ನು ನೋಡಿದಂತಾಯ್ತು. ಪಾಪಿ ಈ ಕಾನ್ಸ್ಟೇಬಲ್ಲು ಮೊಸಳೆ ನನ್ನ ಕಾಲು ಹಿಡಿದಿತ್ತು ಕಾನೂನೆಂಬ ಹಲ್ಲಿನಿಂದ.

"ಅಲ್ಲಿ ನಿಂತ್ಕೊಳ್ಳಿ...." ದರ್ಬಾರಿ ದಬಾವಣೆ, ಧ್ವನಿಯಲ್ಲಿ ಹೇಳಿ ಆ ಬುಳ್ಳಪ ದಫೇದಾರ್ರಿಗೆ ಸಲಾಮು ಹೊಡೆದ.

"ಯಾರೋ ಅದು........" ಮುಚ್ಚಿದ ಕಣ್ಣಿಂದಲೇ ನೋಡಿ ಹೇಳಿದರು ದಫೇದಾರ್ರು.

"ರಸ್ತೇಲಿ ನಿಂತ್ಕೊಂಡು—ಟ್ರಾಫಿಕ್ ತಡೆದು—ಜನಾನ್ನ ಸೇರ್ಸಿ ತೊಂದ್ರೆ ಮಾಡ್ತಿದ್ರು ."

"ಹಿಡ್ಕೊಂಡು ಬಂದ್ಬಿದಿಯಾ ಅಪರಾಧೀನಾ?"

"ಹೂಂ ದಫೇದಾರ್ರೆ"

"ಸರಿ ಲಾಕಪ್ಪಿನಲ್ಲಿ ಹಾಕಿ—ಎಲ್ಡು ಬಿಗಿದು ಕಳಿಸಿಬಿಡು, ಪಾಪ – ಇನ್ನೊಂದ್ಸಲ ಹಿಂಗೆ ಮಾಡಬ್ಯಾಡಾಂತ ಬುದ್ಧಿ ಹೇಳಿ ಕಳಿಸು."

—ನಿನೂರು ಕೆಲಸ, ಸಿಕ್ಕವರನ್ನ ಹಿಡಿದು ಲಾಕಪ್ಪಿನಲ್ಲಿ ಹಾಕಿ ಎರಡು ಬಿಗಿತಾರೆಯೆ? ಅನ್ಯಾಯ ಇವರು ನಗರ ರಕ್ಷಕರೆ? ಅಥವ ಭಕ್ಷಕರೆ? ಇವರೆಂಥಾ ದಫೆದಾರ್ರು ಕಣ್ಣುಮುಚ್ಚಿ ಲಾಕಪ್ಪಿಗೆ ಹಾಕು ಅಂತ ಅಪರಾಧಿನ್ನ ನೋಡದೆಯೇ ಹೇಳ್ತಾರಲ್ಲಾ. ನಾನು ಹೇಗೆ ಸುಮ್ಮನಿರಲಿ? ಕೇಳಿದೆ ಅವರನ್ನ.

"ಸ್ವಾಮಿ ದೇರಣ್ಣೋರೆ, ಇಲ್ಲಿ ನೋಡಿ— ತಮ್ಮಂತಹ ಆಫೀಸರು ಹೀಗೆ ಮಾಡ್ತಾರೆಯೆ? ಸ್ವಲ್ಪ ನೋಡಿ ವಿಚಾರಣೆ ಮಾಡಬೇಕು—ನಾನೇನು ಅಂಥಾ ಅಪರಾಧ ಮಾಡಿದ್ದು....ವಿಚಾರಿಸಬಾರದೆ?"

ಎಂದು ಅಂಗಲಾಚುವ ಧ್ವನಿಯಲ್ಲೇ ಹೇಳಿದೆ. ಧ್ವನಿ ಕೇಳಿ ಕಣ್ಣುಬಿಟ್ಟರು, ಕಾಲು ಮೇಜಿನಿಂದ ಕೆಳಕ್ಕೆ ಇಳಿಸಿದರು, ಪೇಟ ತಲೆಯಿಂದ ಮೇಜಿಗಿಳಿಸಿದರು—ಗಂಟಲು ಸರಿಮಾಡಿಕೊಂಡರು—ಕತ್ತು ಕೊರೆಯುತ್ತಿದ್ದ ಮೇಲು ಗುಂಡಿ ಬಿಚ್ಚಿ ಸಡಲಿಸಿದರು ಗಂಟಲು ಕ್ಯಾಕರಿಸಿದರು ಆಳವಾಗಿ ಆಕಳಿಸಿ ಕಣ್ಣುಜ್ಜಿ—ನೋಡಿದರು ಶ್ರೀಮಾನ್ ದಫೆದಾರ್ ದೇರಣ್ಣೋರು.

"ರೂಲ್ಸೊ ಮಣ್ಣಾಂಗಿಯೊ ಯಾರಾದರೇನ್ರಿ ನೀವು ಸ್ನೇಹಿತರಿದ್ದರೆ ಮನೆಗೆ ಬನ್ನಿ ನಿಮ್ಮ ಹೆಂಡ್ತಿನ್ನೂ ಕರ್ಕೊಂಡು ಬನ್ನಿ ನನ್ನ ಹೆಂಡ್ತಿ ಕೈಲಿ ಉಪಚಾರ ಹೇಳ್ಸಿ ಅಡಕೆಲೆ ಕೊಡೋಣಂತೆ—ತಪ್ಪು ಮಾಡಿಗರೆ ತೆಪ್ಪನಿರೋಕೆ ಆಗುತ್ತ್ಯೆ? ಸ್ನೇಹ ಎಲ್ಲಾ ಪೋಲೀಸ್ ಸ್ಟೇಷನ್ ಹೊರಗೆ—ದಂಡಿನಲ್ಲಿ ಸೋದರಮಾವನೆ?—ಏ ಬುಳ್ಳಪ್ಪ ಎನ್ನೋಡ್ತಿ ಮುಖಾನಾ ಹೋಗು....ಒಂದ್ಲೋಟ ನೀರು ತೊಗೊ...."

ತತ್ತರಿಸಿದೆ ನಾನು. ಬುಳ್ಳಪ್ಪನನ್ನು ಕೂಗಿದ ವರಸೇಲಿ ನನಗೆ ಬೆಲ್ಟಿನಿಂದ ಬಿಗಿಸೇ ಬಿಡುವರೇನೋ ಎಂದು ಹೆದರಿದ್ದೆ. ಹಣೆಯ ಮೇಲೆ ಸಾಲಾಗಿ ಬೆವರು ಹನಿ ಮೂಡಿದುವು. ನಂಬಿದ ದೇವರು ನುಂಗೇ ಬಿಟ್ಟಂತಾಯಿತು. ಇದೇನು ದೇರಣ್ಣ ದೇವರು ಇಷ್ಟು ನಿರ್ದಯರಾದರೆ? ಇದೆಲ್ಲಿಯ ಗ್ರಹಚಾರ? ನನ್ನ ಪಾಡಿಗೆ ನಾನು ಆ ಹಾಳು ಲಕ್ಷ್ಮಣನ್ನ ಮಾತಾಡಿಸದೇ ಹೋಗಬೇಕಿತ್ತು. ಒಂದು ರೂಪಾಯಿಯ ವಸೂಲಿಗೆ ನಾನೇ ಕೋರ್ಟಿನಲ್ಲಿ ದಂಡ ತೆರಬೇಕಾದ ಪ್ರಸಂಗ ಬಂದೊದಗಿತ್ತು.

ಬುಳ್ಳಪ್ಪ ಕೊಟ್ಟ ನೀರನ್ನು ಕುಡಿದ ಮೇಲೆ ದ॥ ದೇರಣ್ಣೋರ ಮುಖ ಕೊಂಚ ಪ್ರಫುಲ್ಲವಾಯಿತು. ದೇಹ ತಂಪಾದ್ದರ ಫಲವಿರಬೇಕು.

"ಲೇ, ಬುಳ್ಳಾ—ಎಲ್ಲಿ ಸಿಕ್ರು ಇವರು?"

"ರಸ್ತೇಲಿ—ಸೈಕಲ್ ಸಮೇತ"

"ನಿಜವೇನ್ರೀ...."

"ನಾನೂ....ಅಲ್ಲೀ—ಸ್ನೇಹಿತ....ಲಕ್ಷ್ಮಣ"

"...ಕೇಳಿದ್ದಕ್ಕೆ ಉತ್ತರ ಹೇಳ್ರೀ, ನಿಮ್ಮ ಪುರಾಣ ಬೇಕಿಲ್ಲ—ರಸ್ತೇಲಿ ಸೈಕಲ್ ಸಮೇತ ಸಿಕ್ಕಿದ್ದು ಉಂಟೊ ಇಲ್ಲವೊ ..."

"ಉಂಟು ..."

"ಹೆಸರು—ಅಪ್ಪನ ಹೆಸರು—ಕಸಬು—ವಾಸಸ್ಥಳ....ಎಲ್ಲಾ ಈ ಕಾಗದದಲ್ಲಿ ಬರೀರಿ—ಸೈಕಲ್ಲು ಆ ಮೂಲೆಗೇ ಇರ್ಲಿ, ಕೋರ್ಟಿಂದ ಸಮನ್ ಬರ್‍ತದೆ—ಆಗ ಹಾಜರಾಗಿ ಹೋಗಿ."

ನನಗೆ ರೇಗ್ತು—ಹ್ಯಾಗೂ ಕೆಟ್ಟೆ ಏತಕ್ಕೆ ಇವರ ಮುಲಾಜು ”

“ಇದೇನ್ರೀ ಕೈಲಿ ಬೆಲ್ಟಿದೇಂತ ಚಿಕ್ಕಿನ ಬೆನ್ನಿಗೆ ಬಿಗಿಯೋದೇನ್ರೀ—ಯಾರಾದರೂ ಕಳ್ಳರನ್ನ, ಕದೀಮರನ್ನ, ಕನ್ನೋಜಿಗಳನ್ನ ಹಿಡಿದರೆ ನಿಮಗೂ ಹೆಸರು—ದೇಶಕ್ಕೂ ಕ್ಷೇಮ. ಬೀದಿಲ್ಲಿ ಇನ್ನೆಲ್ಲಿ ್ರೀ ನಿಂತ್ಕೊಂಡು ಘಾತಾಡೋದು—ನಾನೂ ನೋಡ್ತಾ ಇದ್ದೀನಿ ಬೆದರಿದೋರ ಮೇಲೆ ಬರೆ ಎಳಿಯೋಕೆ ಮಾಡ್ತೀರೇ ಹೊರ್ತು ಕಳ್ರನ್ನ ಹಿಡಿಯೋಲ್ಲ. ಊರೊಳಗೆಲ್ಲಾ ಕಳ್ಳರ ಕಾಟ. ರಾತ್ರಿಯಾಗತ್ಲೂ ನೆಮ್ಮದಿಯಾಗಿ ಮಲಗೋಕಾಗೋಲ್ಲ ನಮಗೆ ಕಾಡೊ ಪೋಲೀಸ್ನೋನೇ ಕೇಳು ಹೇಳ್ತೀನಿ—ನಿನಗೆ ನಮ್ಮಂಥ ಬೀದಿ ಮಾತ್ನೋರು—ಫುಟಪಾತ್ನಲ್ಲಿ ಬಾಳೇ ಹಣ್ಣು ಮಾರೋರು—ಡಬ್ಬಲ್ ರೈಡ್ ಸೈಕಲ್ ಸವಾರ, ದೀಪ ಇಲ್ದ ಗಾಡಿಯೋನು ಇವರೇ ಸಿಗೋರು. ಇದರಂಥ ನೊಣ ಹಿಡಿಯೋ ಕೆಲಸಕ್ಕಿಂತ ನೇಣು ಹಾಕ್ಕೊಂಡು ಸಾಯೋದು ಮೇಲು ...”

ಎಂದು ಬಡ ಬಡ ಬಡ ಬಡಿಸಿಬಿಟ್ಟೆ ಧೈರ್ಯದಿಂದ. ಗಾಬರಿಯಾಗಿ ಡಂಗುಬಡಿದು ನಿಂತಿದ್ದ ಬುಳ್ಳಪ್ಪ—ನನ್ನ ಹಿಡಿದು ತಂದ ಧೀರ. ಬೆವತಿದ್ದರು ದಫೇದಾರ್ರು.

“ಲೇ ಬುಳ್ಳಾ—ಹೋಗೋ ನಿನ್ನ ಕೆಲ್ಸ ನೋಡ್ಕೊ ಹೋಗೊ—ಬೇವರ್ಸಿ ನನ್ಮಗನೆ—ನೋಡ್ತಾ ಇದ್ದಾನೇನೋ....” ಎಂದು ಅವನ ಮೇಲೆ ಸಿಟ್ಟುಮಾಡಿ ಅಟ್ಟಿದರು. ಆ ಮೇಲೆ ನನ್ನ ಹತ್ತಿರ ಕರೆದು ಬದಿಯ ಸ್ಟೂಲನ್ನೂ ಅಲಂಕರಿಸುವಂತೆ ಕೇಳಿದರು. ತಂಪಾದ ಹೂಜಿ ನೀರು ಎದುರಿಗಿಟ್ಟರು. ಕುಡಿಸಿದರು—“ಕೋಪ ಇಳೀತಾ” ಅಂತ ಕೇಳಿದರು.

“ಅಲ್ಲ ಮತ್ತೆ—ಇನ್ನೇನ್ರಿ ದಫೇದಾರ್ರೆ ಮಾಡೋದು. ರಸ್ತೇಲಿ ನಿಂತ್ಕೊಂಡು ಹಳೇ ಬಾಕಿ ವಸೂಲಿಗೇಂತ ನಿಂತು ಕೇಳ್ತಾ ಇದ್ರೆ—ನಡೀ ಕೋರ್ಟಿಗೆ, ಕೊಡು ಐದು ರೂಪಾಯಿ ಫೈನು—ಅಂದ್ರೆ ಬಡವರು ಎಲ್ಲಿ ಹೋಗೋಣ.”

“ಬಡವರಿಗೇ ಎರಡು ಮಡಗೋದು—ಗೊತ್ತಾ—ಹೋಗ್ಲಿ, ಆ ಬುಳ್ಳ ಹಿಡ್ಕೊಂಡು ಬಂದನಲ್ಲಾಂತ ಅವನೆದುರಿಗೆ ಹಂಗಂದೆ—ನಿನ್ನ ಜೈಲಿಗೆ ಕೋರ್ಟಿಗೆ ಎಳೀತೀನೇನಪ್ಪಾ....”

— ಉಸ್ಸಪ್ಪ. ಸಧ್ಯ ದೇರಣ್ಣೋರು ದೇರಣ್ಣೋರ ಹಾಗೇ ಆದರಲ್ಲ—ಎಂದು ನಿಡಿದಾದ ಉಸಿರು ಬಿಟ್ಟೆ. ಅವರೇ ಹೇಳತೊಡಗಿದರು.

“ನಿಜ ನೀ ಹೇಳೋದು ನಿಜ—ಕಳ್ರು ಕದೀಮರನ್ನ ಹಿಡಿಯೋಕೆ ಆ ಸೂಳೆ ಮಕ್ಳು ಸಿಕ್ಕಲ್ಲ—ಇನ್ನು ಬರೀ ಕೈಲಿ ಹೆಂಗೆ ಬರೋದು ಸ್ಟೇಷನ್ನಿಗೆ ನಾಚಿಕೆ

ಆಗೊಲ್ವ? ಅದಕ್ಕೆ ಪುಟ್‌ಪಾತ್ ಪಾಪಿಗಳು— ಬೀದೀಲಿ ನಡಿಯೋ ಬೇವರ್ಸಿಗಳನ್ನ ಹಿಡಿದು ತರ್ತಾವೆ ಈ ಪೋಲೀಸು ಆಳುಗಳು....ಮತ್ತಿನ್ನೇನು - ಮನೇಲೆಲ್ಲಾ ಸೌಖ್ಯವಾ-- ಯಾಕೆ ಮನೆಕಡೆ ಬರ್ಲೇ ಇಲ್ಲ ಶಾನೆದಿನ ಆಯ್ತು"

—ಬದುಕಿದೆಯಾ ಒಡಜೀವಾ - ಹಳೆಯ ದಫೆದಾರ್ರೇ ಆಗಿಬಿಟ್ರು ದೇರಣ್ಣೋರು ಥೇಟ್.

"ಹೆದರಿಸಿ ಬಿಟ್ರಲ್ಲಾ ದೇರಣ್ಣೋರೆ"

"ಸುಮ್ಮನೇ ಹಂಗಂದ್ರೆ ನೀನು ರೇಗೋದಾ—ಇನ್ಯಾರಾನ ಹಿಂಗೆ ರೇಗಿದ್ರೆ ಕೋದಂಡಕ್ಕೆ ಏರಿಸಿ ಕೈಕಾಲು ಮುರೀತಿದ್ದೆ. ನಿನ್ನ ಹೆಂಡ್ರು ನನ್ನ ಹೆಂಡ್ರು ದೋಸ್ತಿ ಆಗೂಹೊತ್ತಿಗೆ ನೀನು ಬದುಕೊಂಡೆ."

"ಹೆಂಡ್ರು ಹೆಂಡ್ರು ದೋಸ್ತಿನೇ ನನ್ನ ಬಿಡಿಸಿದ್ದೂನ್ನಿ...."

"ಹೌದು ಹಿಂಗಾಯ್ತು ಅಂತ ಸಾವಂತ್ರಿಗೆ ಹೇಳಿದರೆ ಅವಳು ಅಳ್ತಾಳೆ—'ನನ್ನ ಸ್ನೇಹಿತೆ ಗಂಡಂದಿರು ಜೈಲಿಗ್ಹೋದ್ರೇ' ಅಂತ. ಅವಳ ದುಃಖ ನಾನು ನೋಡಲಿಕ್ಕೇ ಆಗೋಲ್ಲ. ಆದ್ರಿಂದ ನಿನ್ನ ಬಚಾವು ಮಾಡ್ದೆ....."

"ಸರಿ ಹಾಗಾದ್ರೇ ಬರ್ಲೇ....ನಮಸ್ಕಾರ—"

"ಅಷ್ಟು ಸುಲಭ ಅಲ್ಲ....ಇಲ್ಲಿಂದ ಹೋಗೋದು. ಕೇಸು ಹಾಕಿದ್ರೆ ಆರು ರೂಪಾಯಿ-ಜುಲ್ಮಾನೆ—ಖಂಡಿತ. ಈಗ ಒಂದೇ ರೂಪಾಯಿ ಎಂಟೇ ಆಣೆ ಪೈನು. ಗೊತ್ತಾ ತೆಗಿರಿ ಜೇಬಲ್ಲಿ ಎಷ್ಟಿದೆ."

ಇದೆಂತಹ ಸ್ನೇಹ—ಇದೆಂತಹ ಬಿಡುಗಡೆ. ಎಂದು ಯೋಚಿಸುವುದರಲ್ಲಿ ಅವರು ಬೃಹತ್ ಮೀಸೆ ತಿರುವಿ—ನನ್ನ ಜೇಬಿಗೆ ಕೈಹಾಕಿ- ಇದ್ದ ಎರಡು ರೂಪಾಯಿ ತೆಗೆದು "ಏ ಬುಳ್ಳಾ—" ಎಂದು ಆರ್ಭಟಿಸಿದರು ಹೊರಗೆ ಕಟ್ಟೆಮೇಲೆ ಕುಳಿತಿದ್ದ ಬುಳ್ಳಪ್ಪ ಬಂದ.

"ಸೀದಾ ಗುಂಡಪ್ಪನ ಹೋಟ್ಲಗೆ ಹೋಗಿ ಒಂದು ಸೇರು ಹಸನ್ ಪಕೋಡ ಕಟ್ಟಿಕ್ಕೊಂಡು ನಮ್ಮನೆಗೆ ಕೊಡು. ಉಳಿದ ದುಡ್ನಲ್ಲಿ ಮಾರ್ಕೆಟ್‌ನಿಂದ ಮಲ್ಲಿಗೆ ಹೂವಿನ ಕುಚ್ಚು ಕೊಂಡು ಸಾವಂತಮ್ಮನವರ ಕೈಲಿ ಕೊಡು" ಎಂದು ಹುಕುಂ ಮಾಡಿದರು. ಅವನು ಓಡಿದ.

"ನಾವು ಹೀಗೇ ಅಡ್ಡಾಡಿಕೊಂಡು ಮನೆಗೆ ಹೋಗೋಣ ಅಷ್ಟರಲ್ಲಿ ಅವನು ಪಕೋಡ ತಂದಿರ್ತಾನೆ. ಸಾವಂತ್ರಿ ಹೂಮುಡಿದು ಕಾಫಿ—ತಿಳಿಹಾಲು ತಯಾರು ಮಾಡ್ತಾಳೆ—ಬನ್ನಿ ಹೋಗೋಣ" ಎಂದು ಸೈಕಲ್ಲಿನ ಜೊತೆ ನನ್ನ ಎಳೆದೇ ಒಯ್ದರು ದಫೇದಾರ್ರು. ಭೂತ ತೃಪ್ತಿ ಎಂದು ಹಿಂಬಾಲಿಸಿದೆ.

—ದಾಶರಥಿ ದೀಕ್ಷಿತ್.



ಕೆಟ್ಟ ದೃಷ್ಟಿ

ಹುಷಾರ್


ಕೆಟ್ಟ ದೃಷ್ಟಿಯಿಂದ ಸಣ್ಣ ಕೆಡಕುಗಳು ಹಾಗೂ ದೊಡ್ಡ ಕೇಡುಗಳು ಆಗುತ್ತದೆ ಎಂದು ಹಲವಾರು ದೇಶಗಳಲ್ಲಿ ನಂಬಿಕೆ ಇದೆ.

ಮಾನವನಿಗೆ ಬದುಕಬೇಕೆಂಬ ಹಂಬಲವು ಹುಟ್ಟುತ್ತಲೇ ಬರುತ್ತದೆ. ಬೆಳೆದಾಗ ರಕ್ಷಣೆಹೊಂದುವ ಆಸೆಯಾಗುತ್ತದೆ. ಹಸಿವಿನ ಹೆದರಿಕೆ, ಅಂಗಹೀನವಾಗುವ ಭಯ, ಮುಪ್ಪಿನ ಭೀತಿ, ಇವೆಲ್ಲವೂ ಸ್ಥಿರವಾದ ರಕ್ಷಣೆಯನ್ನೇ ನಿರೀಕ್ಷಿಸುತ್ತದೆ. ಸ್ವಲ್ಪ ತ್ಯಾಗಮಾಡಿದರೆ, ಈ ರಕ್ಷಣೆ ನಿಮ್ಮದಾಗುತ್ತದೆ.

ವಿವರಗಳಿಗೆ:

ಇಂದೇ ಬರೆಯಿರಿ.





ಎಂಡೋಮೆಂಟ್ ಅಶ್ಯೂರೆನ್ಸ್

ಹಣ ಶೇಖರಿಸಿಡಲು ಅತ್ಯುತ್ತಮ ಮಾರ್ಗ. ವಿಮಾದಾತನು ಅಲ್ಪಾಯುವಾದಲ್ಲಿ 'ಸಂಸಾರಕ್ಕೆ ರಕ್ಷಣೆ ಈಯುವುದು. ಹಿರಿಯ ವಯಸ್ಸಿನಲ್ಲಿ ಆತನಿಗೇ ಕೈನೆರವಾಗುತ್ತದೆ.

ಸ್ಥಾಪನೆ:
1871

ದಿ

ಬಾಂಬೆ ಮ್ಯೂಚುವಲ್
ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್

ಬಾಂಬೆ ಮ್ಯೂಚುವಲ್ ಬಿಲ್ಡಿಂಗ್,
ದಾಧಾಬಾಯ್ ನೌರೋಜಿ ರೋಡ್, ಬೊಂಬಾಯಿ 1.

ಬೆಂಗಳೂರು ಬ್ರಾಂಚ್ ಕಛೇರಿ :—172/3, ನರಸಿಂಹರಾಜಾ ರಸ್ತೆ, ಬೆಂಗಳೂರು 2

EVERY POLICYHOLDER A SHAREHOLDER

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತ ವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪು ನೆಪ್ಪುಗಳು ಕಡಿಮೆಯಾಗುವುವು. ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ೨

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦—೦

ಬಿಡಿ ಪ್ರತಿ ಕೇವಲ ಆಣೆ ೦—೪—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.

ದೀಪಾವಳಿಯ ಬಿಡುಗಡೆ! ಅಕ್ಟೋಬರ್ 25 ರಿಂದ

ಬೆಂಗಳೂರು: ಕೆ. ಜಿ. ಎಫ್.

ಜೈ ಹಿಂದ್ - ಮಿನರ್ವ - ಲಕ್ಷ್ಮಿ — ಗೇ

ಚಿತ್ರಮಂದಿರಗಳಲ್ಲಿ

ಅಶೋಕಾ ಪಿಕ್ಚರ್ಸ್‌ರವರ—

★ ಎನ್ ಮಗಳ್ ★

—[ತಮಿಳು]—

ರಂಜನ್ - ಎಸ್. ವರಲಕ್ಷ್ಮಿ
ನಂಬಿಯಾರ್ - ಮೈನಾವತಿ
ಮೀನಾಕ್ಷಿ.



★

ನಿರ್ಬಂಧ ಮದುವೆಯು ಸಮಾಜದ ಮೇಲೆ ಎಷ್ಟು ವಿನಾಶಕಾರಕ ಪರಿಣಾಮವನ್ನುಂಟುಮಾಡುವುದೆಂಬುದನ್ನು ನಿರೂಪಿಸುವ ಚಿತ್ರ.

ಪ್ರತಿಯೊಂದು ಸಂಸಾರವೂ
ತಪ್ಪದೆ ನೋಡಲೇಬೇಕಾದ ಮಹತ್ತರ ಚಿತ್ರ.

★

ಶೀಘ್ರದಲ್ಲಿಯೇ

ಮೈಸೂರು: ವುಡ್ ಲ್ಯಾಂಡ್ಸ್

ದಾವಣಗೆರೆ: ಅಶೋಕಾ

A PRAKASH RELEASE

REG No. M. 4718 KORAVANJI, NOVEMBER 1954

Printed by B. S. Iyengar, Bangalore City
Publisher—B. N. Gupta. Editor—M Sivaram